ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 35 ಅಗಸ್ಟ 30, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಮುಂದಿನ ಸಂಚಿಕೆಯಲ್ಲಿ

ಸಾಮೂಹಿಕ ಹೋರಾಟಗಳ ಹೊಸ ಅಲೆ ಎಬ್ಬಿಸಲು ಸಾಧ್ಯ

– ಇ. ಎಂ. ಎಸ್. ನಂಬೂದಿರಿಪಾದ್

ಆಗಸ್ಟ 12 ರಂದು ಪ್ರತಿಕೆಗಳಿಗೆ ಹೊರಡಿಸಿದ ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯ ರಾಜಕೀಯ ಠರಾವಿಗೆ ರಾಜಕೀಯ ಮುಖಂಡರು ಹಾಗೂ ಪತ್ರಿಕೆಗಳ ಪ್ರತಿಕ್ರಿಯೆ ಭಿನ್ನ-ಭಿನ್ನವಾಗಿದ್ದು ಕುತೂಹಲಕಾರಿಯಾಗಿದೆ. ಸೋಶಲಿಸ್ಟ್ ಫೋರಮ್'ನ ಕೆಲವು ಕಾಂಗ್ರೆಸ್(ಐ) ಎಂ.ಪಿ.ಗಳಮತ್ತು ಇಪ್ಪತ್ತು ಎಂ. ಪಿ.ಗಳ ಇನ್ನೊಂದು ಗುಂಪಿನ ಸಿಟ್ಟಿನ ಮಾತುಗಳಿಂದ ಹಿಡಿದು ಇತ್ತ ಪಕ್ಷ ತನ್ನ "ದಾರಿ ಬದಲಿಸಿದ್ದಕ್ಕೆ ಅಭಿನಂದಿಸಿದ" ಪ್ರತಿಕೆಗಳ ಅಪಹಾಸ್ಯ, ಮೂದಲಿಕೆಯವರೆಗೆ ಹರಡಿವೆ ಇವು.

ಇದನ್ನು 'ವಿ.ಪಿ.ಸಿಂಗ' ಅರುಣ್ ನೆಹ್ರೂ ಮತ್ತು ಆರಿಫ್‌ಮಹಮದ್ ಖಾನ್‌ರ ಆರ್ಥಿಕಧೋರಣೆಗಳ ಬಗ್ಗೆ ಸಿ.ಪಿ.ಐ.(ಎಂ) ದೃಷ್ಟಿ"ಏನು ಎಂದ ಪ್ರಧಾನಮಂತ್ರಿ ಹಾಗೂ ಕಾಂಗ್ರೆಸ್ ಅಧ್ಯಕ್ಷ ರಾಜೀವ್ ಗಾಂಧಿಯವರ ದನಿ ಇನ್ನಷ್ಟು ಬಲಗೊಳಿಸಿದೆ.

ಕಲ್ಕತ್ತಾ ದಿನಪತ್ರಿಕೆ 'ದಿ ಟೆಲಿಗ್ರಾಫ್' ನ ಕುತೂಹಲಕಾರೀ ಸಂಪಾದಕೀಯ–ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಕ್ಷ ಗಂಭೀರ ಪರಿಶೀಲನೆಯ ನಂತರವೇ ಭಾರತದ ನಿಜವಾದ ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮೀ ಶಕ್ತಿಗಳು ರಾಜೀವ್‌ಗಾಂಧಿಯವರನ್ನು ಅಸ್ಥಿರಗೊಳಿಸುವ ಪ್ರಯತ್ನಗ ವಿರುದ್ಧ ಹೋರಾಡ ಬೇಕೆಂದು ಸೋವಿಯತ್ ಕಮ್ಯುನಿಷ್ಟ ಪಕ್ಷದ ಸೈದ್ಧಾಂತಿಕ ಪತ್ರಿಕೆ "ಕಮ್ಯುನಿಸ್ಟ್" ಮೂಲಕ ಕರೆ ಕೊಟ್ಟಿದೆ. ಅದರಿಂದಾಗಿ ಇದನ್ನು ಸಿ·ಪಿ;ಐಅಥವಾ ಸಿ.ಪಿ.ಐ.(ಎಂ) ಹಗುರವಾಗಿ ಕಂಡು ಬದಿಗೆ ತಳ್ಳಲು ಸಾಧ್ಯವಿಲ್ಲವಾದರೂ ಎರಡು ಕಮ್ಯುನಿಸ್ಟ್ ಪಕ್ಷಗಳು ರಾಜೀವ್‌ಗಾಂಧಿಯವರ ರಾಜೀನಾಮೆಮತ್ತು ಮಧ್ಯಾವಧಿ ಚುನಾವಣೆಗಾಗಿ ಏಕೆ ಒತ್ತಾಯಿಸುತ್ತಿವೆ. ಎಂದು ಪ್ರಶ್ನಿಸಿದೆ ಅದಕ್ಕೆ ತಾನೇ "ರಾಜೀವ್‌ಗಾಂಧಿಯವರ ರಾಜಕೀಯ ಉಳಿವಿಗೆ ನಿಜವಾದ ಬೆದರಿಕೆಯಿದ್ದಾಗ ಮಾತ್ರ ಎಡಪಂಥೀಯರು ಅವರನ್ನು ಬೆಂಬಲಿಸುತ್ತಾರೆ. ಉಳಿದ ಸಮಯದಲ್ಲಿ ಇತರ ವಿರೋಧ ಪಕ್ಷಗಳಂತೆ ವರ್ತಿಸುತ್ತಾರೆ. ಎಂದು ಸಮಾಧಾನ ಕಂಡುಕೊಂಡಿದೆ.

ಸಿ.ಪಿ.ಎಸ್.ಯು.ನ ಪರಿಶೀಲನೆ ಹಾಗೂ ಧೋರಣೆಗಳನ್ನು ನಾವು ಅನುಸರಿಸಲೇ ಬೇಕಾಗುತ್ತದೆ ಎನ್ನುವ ಅಭಿಪ್ರಾಯದಿಂದಲೇ ಆರಂಭಿಸೋಣ. ಈ ರೀತಿಯ ಊಹಾಪೋಹದಲ್ಲಿ ತೊಡಗಿರುವವರು ಇತಿಹಾಸ ಮತ್ತು ರಾಜಕೀಯದ ಗಂಭೀರ ವಿದ್ಯಾರ್ಥಿಗಳಾಗಿದ್ದರೆ, "ಕಮ್ಯುನಿಸ್ಟ ಅಂತರಾಷ್ಟ್ರೀಯ" 44 ವರ್ಷಗಳ ಹಿಂದೇನೇ (1943ರಲ್ಲಿ) ಕೊನೆಗೊಂಡಿತು ಎಂಬುದನ್ನು ನೆನಪಿಸಿಕೊಳ್ಳಲಿ. ಅಂದಿನಿಂದ ಪ್ರತಿಯೊಂದು ದೇಶದ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷ ತನ್ನ ಸ್ವಂತ ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿವೆ. ಮತ್ತು ಅಂತರಾಷ್ಟ್ರೀಯ ಸಮಸ್ಯೆಗಳಿಗೆ ಸಂಬಂಧ ಪಟ್ಟಂತೆ ಅವು ತಮ್ಮ ಚಟುವಟಿಕೆಗಳನ್ನು ಪರಸ್ಪರ ಸಂಯೋಜಿಸುತ್ತಾ ಬಂದಿವೆ.

ಸಿ. ಪಿ. ಎಸ್ .ಯು .ನ 27ನೇ ಮಹಾಧಿವೇಶನ ಅಂಗೀಕರಿಸಿದ ಮೂರನೇ ಕಾರ್ಯಕ್ರಮದ ಹೊಸ ಆವೃತ್ತಿ ಕೂಡಾ ಜಾಗತಿಕಕಮ್ಯುನಿಸ್ಟ್ ಆಂದೋಲನದ ಈಸರ್ವಮಾನ್ಯನಿಲುವನ್ನು ಮತ್ತೊಮ್ಮೆ ಒತ್ತಿ ಹೇಳುತ್ತಾ ಬಿಡಿ ಪ್ರಶ್ನೆಗಳ ಬಗ್ಗೆ ಭಿನ್ನಾಭಿಪ್ರಾಯದಿಂದಾಗಿ ಕಮ್ಯುನಿಸ್ಟ್ ಪಕ್ಷಗಳ ಅಂತರಾಷ್ಟ್ರೀಯ ಸಹಕಾರಕ್ಕೆ ಅಡ್ಡಿಯಾಗುವುದಿಲ್ಲ ಎಂದು ಸಿ.ಪಿ.ಎಸ್.ಯು. ನಂಬಿಕೆ ಆದರೆ ಪ್ರಶ್ನೆ ಮಾರ್ಕ್ಸ್‌ವಾದ ಲೆನಿನ್‌ವಾದದ ಕ್ರಾಂತಿಕಾರೀ ಸತ್ವಕ್ಕೆ ಮತ್ತು ಸಮಾಜವಾದದ ನಿಜವಾದ ಪಾತ್ರಕ್ಕೆ ಸಂಬಂಧ ಪಟ್ಟದ್ದರೆ, ಆಗ ಸಿ.ಪಿ.ಎಸ್.ಯು. ಮಾರ್ಕ್ಸ್‌ವಾದಿ ತಾತ್ವಿಕ ನಿಲುವನ್ನು ಎತ್ತಿ ಹಿಡಿಯುವುದು ಎಂದಿದೆ.

ಕಳೆದ 23 ವರ್ಷಗಳ ತನ್ನ ಸ್ವತಂತ್ರ ಅಸ್ತಿತ್ವದಲ್ಲಿ ಸಿ.ಪಿ.ಐ.(ಎಂ) ಇದೇ ಮಾರ್ಗವನ್ನು ಅನುಸರಿಸುತ್ತಾ ಬಂದಿದೆ. ಆಗಿನ ಸಿ.ಪಿ ಎಸ್·ಯು ಅಂತರಾಷ್ಟ್ರೀಯ ಪರಿಸ್ಥಿತಿ ಮತ್ತು ಭಾರತದ ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಮಾಡಿದ ವಿಶ್ಲೇಷಣೆಯನ್ನು ಪಕ್ಷ ಒಪ್ಪಲಿಲ್ಲ. ಆದರೆ ಇದು ಸಿ. ಪಿ. ಎಸ್.ಯು. ಮತ್ತು ಇತರ ಸೋದರ ಪಕ್ಷಗಳೊಂದಿಗೆ ಸೌಹಾರ್ದಭಾವನೆಗಳೇನು ಅಡ್ಡಿ ತರಲಿಲ್ಲ.

ಅಂತರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ನಮ್ಮೆರಡು ಪಕ್ಷಗಳ ನಡುವಿನ ಭಿನ್ನಾಭಿಪ್ರಾಯಗಳು ಈಗ ಸುಮಾರಾಗಿ ಪರಿಹಾರವಾಗಿವೆ. ಆದರೆ ನಮ್ಮ ದೇಶದ ಆಂತರಿಕ ಪರಿಸ್ಥಿತಿ ಮತ್ತು ಸಮಸ್ಯೆಗಳಬಗ್ಗೆ ಭಿನ್ನಾಭಿಪ್ರಾಯಗಳು ಮುಂದುವರಿಯುತ್ತಿವೆ ಎಂಬುದು 'ನ್ಯೂಟೈಮ್ಸ್' 'ಪ್ರಾವ್ದಾ, ಮತ್ತು

[8ನೇ ಪುಟ ನೋಡಿ]

ಸೆ. 7–13ರ 5 ಲಕ್ಷ ರೈತರ ಬಂಧನ ಕಾರ್ಯಕ್ರಮ

ರೈತರ ಧೀರ ಹೋರಾಟಕ್ಕೆ ಅಣಿಯಾಗೋಣ

ಪಿ. ರಾಮಚಂದ್ರರಾವ್

ಅಖಿಲ ಭಾರತ ಕಿಸಾನ್ ಸಭಾವು 1945–47 ರ ಕಾಲ ಘಟ್ಟದಲ್ಲಿ ಭಾರತದಾದ್ಯಂತ ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದಾಗ ಪಶ್ಚಿಮ ಬಂಗಾಳದಲ್ಲಿ ತೇಭಾಗ ಹೋರಾಟ,ಮಹಾರಾಷ್ಟ್ರದಲ್ಲಿವಾರ್ಲಿಹೋರಾಟಕೇರಳದಲ್ಲಿ ಪುನ್ನಪ್ರರ ವಯಲಾರ್‌ಮತ್ತು ಕೈಯೂರು ಹೋರಾಟ ಹಾಗೂಆಂಧ್ರದಲ್ಲಿ ತೆಲಂಗಾಣ ಹೋರಾಟಗಳನ್ನು ಧೀರೋದಾತ್ತವಾಗಿ ನಡೆಸಿ ಭಾರತದ ಸ್ವಾತಂತ್ರ್ಯದಹೋರಾಟವನ್ನು ಇಡೀಯಾಗಿ ಕ್ರಾಂತಿಕಾರಿ ಹಂತಕ್ಕೆ ಒಯ್ಯುವ ತಿರುವಿಗಾಗಿ ಪ್ರಯತ್ನಿಸಿತು.

ಸ್ವಾತಂತ್ರ್ಯ ಬಂದ ನಂತರ ಭಾರತದಲ್ಲಿ ಗುತ್ತೇದಾರಿ ನೇತೃತ್ವದ ಬಂಡವಾಳಶಾಹಿ ವರ್ಗ ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ ರೈತ ಕಾರ್ಮಿಕರನ್ನು ಕೈಬಿಟ್ಟು ಆತನಕ ಬ್ರಿಟಿಷರ ಜೊತೆ ಸೇರಿ ಸ್ವಾತಂತ್ರ್ಯಕ್ಕೆ ಏನನ್ನು ಕೊಡುಗೆ ನೀಡದ ಜಮೀನ್ದಾರಿ ವರ್ಗದೊಡನೆ ವರ್ಗಸಮ್ಮತಿ ಬೆಸಿ, ದೇಶದಲ್ಲಿ ಆಳಲು ಉಪಕ್ರಮಿಸಿದರು. ಆದರೆ....

ಈಗ 40 ವರ್ಷಗಳ ನಂತರ ನಾವು ದೇಶದಲ್ಲಿ ಏನನ್ನು ನೋಡುತ್ತಿದ್ದೇವೆ ? ದೇಶದ ವಿಶಾಲ ಜನ ವಿಭಾಗಗಳ, ಅದರಲ್ಲೂಶೇ 75–80 ಮಂದಿಗ್ರಾಮಾಂತರದ ರೈತಾಪಿ ಜನತೆಯ ಯಾವುದೇ ಸಮಸ್ಯೆಗಳು ಪರಿಹಾರ ಕಾಣಲಿಲ್ಲ.

ಆದರೆ ಸಮಸ್ಯೆಗಳು ತೀವ್ರಗೊಂಡಿವೆ, ರೈತರ ದುಡಿಮೆ, ಕೃಷಿ ಕೂಲಿಗಾರರ ದುಡಿಮೆ ದೇಶವನ್ನಾಳುವ ಗುತ್ತೆದಾರಿಗಳ ಭೂ ಮಾ ಲೀ ಕ ರ ಬೊಕ್ಕಸಕ್ಕೆ ಸೇರುತ್ತಿದೆ. ರೈತರು ತಳ್ಳಗಾಗುತ್ತಿದ್ದಂತೆ-ಮೂಳೆ ಚಕ್ಕಳವಾಗುತ್ತಿದ್ದಂತೆ–ಟಾಟಾ ಬಿರ್ಲಾಗಳ ಅವರ ಬಂಧುಗಳಾದ ಭೂ ಮಾಲೀಕರ, ದೂರದ ಅಮೇರಿಕಾ ಯೂರೋಪುಗಳ ಅವರ ಗೆಳೆಯರ ಬೊಜ್ಜು ಆಕಾರಾಳ ವಿಕಾರಾಳವಾಗಿ ಬೆಳೆದಿದೆ.

ಈ ಅಸಂತೃಪ್ತಿ ದೇಶವನ್ನು ಛಿದ್ರಗೊಳಿಸುವ ವಿಛಿದ್ರಕಾರಿ ಮಾರ್ಗದಲ್ಲಿ ಹರಿಯುತ್ತಿದೆ.

ಇಂತಹ ಸಂದಿಗ್ಧ ಕಾಲದಲ್ಲಿ ದೇಶದ ರಾಜ ಕಾ ರ ಣ ಕ್ಕೆ ಹೊಸ ತಿರುವನ್ನು ಪ್ರಗತಿಪರ ದಿಕ್ಕಿನಲ್ಲಿ ಕೊಡುವುದಕ್ಕೆ ಭಾರತದ ರೈತರನ್ನು ಸಜ್ಜುಗೊಳಿಸುವ ಕ್ರಾಂತಿಕಾರಿ ಕರ್ತವ್ಯವನ್ನು ಪೂರೈಸುವುದಕ್ಕೆ ಅಖಿಲ ಭಾರತ ಕಿಸಾಸ್ ಸಭಾ ಪುನಃ ಹೆಜ್ಜೆ ಇಡುತ್ತಿದೆ. ಎ.ಐ.ಕೆ.ಎಸ್.ನ ಸುವರ್ಣ ಜ್ಯೂಬಿಲಿ ವರ್ಷದಲ್ಲಿ ಇದೀಗ ಭಾರತದ ಸಮಸ್ತ ರೈತರ 12 ಬೇಡಿಕೆಗಳನ್ನು ಮುಂದಿಟ್ಟು 15 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ರೈತರನ್ನು ದೇಶವಾದ್ಯಂತ ಪ್ರಕ್ಷೋಭೆಗೆ ಇಳಿಸುತ್ತಿದೆ. ಐದು ಲಕ್ಷದಷ್ಟು ಸಂಖ್ಯೆಯಲ್ಲಿ ಪಿಕೆಟಿಂಗ್ ಕಾರ್ಯಾಚರಣೆ ಹಮ್ಮಿಕೊಂಡು 'ಜೈಲು ಭರೋ'ಗೆ ಮುಂದಾಗುತ್ತಿದ್ದಾರೆ. ಕರ್ನಾಟಕದಲ್ಲೂ 50ಸಾವಿರಕ್ಕೂ ಅಧಿಕ ರೈತರೂ ಕೃಷಿ ಕೂಲಿಕಾರರೂ ಪಿಕೆಟಿಂಗ್ ಮಾಡುವ ನಿರೀಕ್ಷೆ ಕಾಣುತ್ತಿದೆ.

ಅಖಿಲ ಭಾರತ ಕಿಸಾನ್ ಸಭಾ ತನ್ನ ಕೋಟಿ ಸದಸ್ಯರ ಸಂಘಟನೆಯ ಶಕ್ತಿಯನ್ನು ಪ್ರಥಮವಾಗಿ ಪ್ರದರ್ಶಿಸಲಿದ್ದಾರೆ. ಭಾರತದ ರೈತರಿಗೆ ನಾವು ಜಯವನ್ನು ಕೋರೋಣ ! ನಾವೆಲ್ಲರೂ ಈ ಧೀರ ಹೋರಾಟದಲ್ಲಿ ಭಾಗವಹಿಸಲು ಅಣಿಯಾಗೋಣ !

1 ಲಕ್ಷ ಯುವಕ, ವಿದ್ಯಾರ್ಥಿಗಳ ದೆಹಲಿ ಚಲೋ

ಸೆಪ್ಟೆಂಬರ್ 23 ರಂದು ಇಡೀ ದೇಶದ ಯುವ ವಿದ್ಯಾರ್ಥಿ ಜನತೆಯ ಪ್ರತಿನಿಧಿಗಳಾಗಿ ಒಂದು ಲಕ್ಷ ಯುವಕ–ವಿದ್ಯಾರ್ಥಿ ಗಳು ದೆಹಲಿಯಲ್ಲಿ ಪಾರ್ಲಿಮೆಂಟ್ ಮುಂದೆ ನಿಂತು ಧ್ವನಿಮೊಳಗಿಸಲಿದ್ದಾರೆ. ಅಂದು ಭ್ರಷ್ಟವಿಶ್ವಾಸ ಕಳೆದುಕೊಂಡ ರಾಜೀವ್‌ಗಾಂಧಿ ಸರ್ಕಾರದ ರಾಜೀನಾಮೆಗಾಗಿ, ಲೋಕಸಭೆಗೆ ಮಧ್ಯಂತರ ಚುನಾವಣೆಗಾಗಿ ಒತ್ತಾಯಿಸಿ ಗುಡುತ್ತವೆ ಈ ಧ್ವನಿಗಳು. ಮೇಲ್ವರ್ಗಗಳ ಪರವಾದ ನೂತನ ಶಿಕ್ಷಣ ನೀತಿ, ಅವೈಜ್ಞಾನಿಕ-ಹುಚ್ಚಾಪಟ್ಟೆ ಕಂಪ್ಯೂಟರೀಕರಣ ಕೈಬಿಡಿ, ಉದ್ಯೋಗ ಮೂಲ ಭೂತ ಹಕ್ಕಾಗಿ ಸಂವಿಧಾನದಲ್ಲಿ ಸೇರಲಿ, ಉದ್ಯೋಗ ಸಿಗುವವರೆಗೂ ನಿರುದ್ಯೋಗ ಭತ್ಯೆ ನೀಡಲಿ,ರಾಜಕೀಯ ಮತ್ತು ಧರ್ಮ ಬೇರ್ಪಡಲಿ, ಎಂದು ಮೊಳಗುತ್ತವೆ ಘೋಷಣೆಗಳು. ಲಕ್ಷ ಕಂಠಗಳಿಂದ ಮೊಳಗಿದ ಈ ಧ್ವನಿಗಳು ದೇಶದೆಲ್ಲೆಡೆ ಅಲೆಯಲೆಯಾಗಿ ಹರಡಿದ ನಂತರ 15 ಯುವಕ - ವಿದ್ಯಾರ್ಥಿ ಸಂಘಟನೆಗಳು ಒಟ್ಟುಗೂಡಿ ಸ್ವತಂತ್ರ ಭಾರತ ಇದುವರೆಗೂ ಕಂಡರಿಯದ ಯುವಕ ವಿದ್ಯಾರ್ಥಿಗಳ ಹೋರಾಟ ವೊಂದನ್ನು ರೂಪಿಸಲಿವೆ ಎಂದು ಎಂ. ಎ. ಬೇಬಿ ಎಂ.ಪಿ. ಹಾಗೂ ಡಿ.ವೈ.ಎಫ್.ಐ. ಜಂಟಿ ಕಾರ್ಯದರ್ಶಿ ಬೆಂಗಳೂರಿನಲ್ಲಿ ಘೋಷಿಸಿದ್ದಾರೆ.

ಸಾಲ್ಕಿಯಾ ಪ್ಲೀನಂ ನಂತರ ಪಕ್ಷ ಕೇಂದ್ರದ ಕಾರ್ಯ

ಪ್ರಶ್ನೆ

ರಾಜಕೀಯ ಅಧಿಕಾರಕ್ಕಾಗಿ ಹೋರಾಡಲು ಮತ್ತು ಗಳಿಸಲು ನಿಜವಾಗಿಯೂ ಶಕ್ತವಾದ ಕಮ್ಯುನಿಸ್ಟ್ ಪಕ್ಷ ಮೇಲಿನಿಂದ ಮಾತ್ರ, ಅಂದರೆ ಪಕ್ಷ ಕೇಂದ್ರದಿಂದ ಮಾತ್ರ ಯಶಸ್ವಿಯಾಗಿ ಕಟ್ಟಬಹುದು, ಎಂಬುದು ಪ್ರಸಿದ್ಧ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ತತ್ವವಾಗಿದೆ. ಅಂತಹ ಒಂದು ಪಕ್ಷ ಕೇಂದ್ರಕ್ಕೆ ಮಾತ್ರ ಬಂಡವಾಳಶಾಹೀ ಭೂಮಾಲಕ ಆಡಳಿತಕ್ಕೆ ವಿರೋಧವಾಗಿ ಹೋರಾಡಲು ಶಕ್ತವಾದ ಕೇಂದ್ರವನ್ನು ಕಟ್ಟಲು ಸಾಧ್ಯ. ಕಾರ್ಯನಿರತವಾದ ಒಂದು ಪಕ್ಷದ ಕೇಂದ್ರಕಟ್ಟದೆ ಒಂದು ನಿಜವಾದ ಸಾಮೂಹಿಕ ಪಕ್ಷವನ್ನು ಕಟ್ಟುವ ಯೋಚನೆ ಬರಿ ಮಾತಷ್ಟೇ.

ಪ್ರ.ಕಾರ್ಯದರ್ಶಿಯೂ ಸೇರಿ 4–5 ಪಿ.ಬಿ. ಸದಸ್ಯರು ಮಾತ್ರ ಹೊಣೆ ಹೊರುವುದು ಸಿ.ಪಿ.ಐ (ಎಂ) ರೀತಿಯ ಒಂದು ಪಕ್ಷದ ಕೇಂದ್ರಕ್ಕೆ ಆಶ್ಚರ್ಯಕರವಾಗಿದೆ. ಪಿ.ಬಿ. ಸದಸ್ಯರೆಲ್ಲರೂ ಕೇಂದ್ರದಿಂದ ಕಾರ್ಯಾಚರಣೆ ಮಾಡುವವರಾಗಬೇಕು. ಪಿ.ಬಿ. ಸದಸ್ಯರನ್ನ ರಾಜ್ಯಸಮಿತಿಗಳಿಂದ ತೆಗೆದರೆ ಮಾತ್ರ ಕೇಂದ್ರಕ್ಕೆ ಅವರ ಸಮಯ ಪೂರ್ಣವಾಗಿಸಿಗುವುದು. ನಿಜವಾದ ಒಂದು ಕ್ರಾಂತಿಕಾರಿ ಪಕ್ಷ ಕಟ್ಟಲು ಮೇಲಿನಿಂದ ಕೆಳಗೆ ಮಾತ್ರ ಸಾಧ್ಯವೆಂಬ ತತ್ವಇರುವ ಒಂದು ಪಕ್ಷಕ್ಕೆ ಹೀಗೇ ಇರುವುದು ಸಾಧ್ಯವೇ?

ಪಕ್ಷ ಕೇಂದ್ರವನ್ನು ಸಶಕ್ತಗೊಳಿಸುವುದರಲ್ಲಿ ಸ್ವೀಕರಿಸಬೇಕಾದ ಸರಿಯಾದ ದಾರಿ ಯಾವುದೆಂದು ಸಾಲ್ಕಿಯಾ ಪ್ಲೀನಂ ವ್ಯಕ್ತಮಾಡಿ 9 ವರ್ಷವಾದರೂ ಹೀಗೇ ಇರುವುದರ ಬಗ್ಗೆ ನಿಮ್ಮಿಂದ ಒಂದು ವಿಶದೀಕರಣವನ್ನು ನಿರೀಕ್ಷಿಸುತ್ತೇನೆ.

–ಎಸ್. ಗೋಪಾಲಕೃಷ್ಣನ್., ಕೇರಳ

ಉತ್ತರ:1978ರಲ್ಲಿ ನಡೆದ ಸಾಲ್ಕಿಯಾ ಪ್ಲೀನಂ ನಂತರ ಪಕ್ಷದ ಅಖಿಲ ಭಾರತ ಕೇಂದ್ರದ ಕೆಲಸದಲ್ಲಿ ಬದಲಾವಣೆ ಆಗಿಲ್ಲವೆಂಬ ಈ ಪ್ರಶ್ನೆಕಾರನ ಅಭಿಪ್ರಾಯ ಸರಿಯಲ್ಲ. ಸಾಲ್ಕಿಯಾ ಪ್ಲೀನಂ ನಿರ್ಣಯದಲ್ಲಿ ಹೇಳಿದುದೆಲ್ಲಾ ಜಾರಿಯಾಗಿಲ್ಲವಾದರೂ ಹಲವಾರು ಅಂಶಗಳು ಜಾರಿಯಾಗಿವೆ. ಉದಾಹರಣೆಗೆ–"ಪ್ರಧಾನ ಕಾರ್ಯದರ್ಶಿ ಸೇರಿ4-5 ಪಿ.ಬಿ.ಸದಸ್ಯರು" ಮಾತ್ರ ಅಲ್ಲ, ಈಗ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವುದು 1985ರ ಕೊನೆಯಲ್ಲಿ ಸೇರಿದ ಪಕ್ಷದ ಮಹಾಧಿವೇಶನದ ನಂತರ ನಾಲ್ಕು ಮಂದಿ ಕೇಂದ್ರ ಸಮಿತಿ ಸದಸ್ಯರು ಪಕ್ಷದ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಮೊದಲು ಸಿ. ಐ .ಟಿ. ಯು. ವಿನ ಅಖಿಲ ಭಾರತ ಕೇಂದ್ರದ ಕಾರ್ಯಕರ್ತರಾಗಿ ರಾಜ್ಯಗಳಲ್ಲಿ ಜವಾಬ್ದಾರಿ ಇಲ್ಲದ ಇಬ್ಬರು ಕೇಂದ್ರಸಮಿತಿ ಸದಸ್ಯರು ಇದ್ದರು.

ಪಿ.ಬಿ.ಸದಸ್ಯರಲ್ಲಿ ಪ್ರಶ್ನೆಕಾರರು ತಿಳಿದಂತೆ "4–5" ಜನ ಬದಲು ಆರು ಸದಸ್ಯರು ಕೇಂದ್ರದಿಂದಲೇ ಕೆಲಸ ಮಾಡುತ್ತಿದ್ದಾರೆ. ಇನ್ನಿತರ ನಾಲ್ವರಲ್ಲಿ ಇಬ್ಬರು ಮುಖ್ಯಮಂತ್ರಿಗಳು ಮತ್ತು ಇಬ್ಬರು ರಾಜ್ಯ ಸಮಿತಿ ಕಾರ್ಯದರ್ಶಿಗಳು ಆಗಿಂದಾಗ ಸೇರುವ ಪಿ.ಬಿ.ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಇವರುಗಳಲ್ಲೇ ಪಿ.ಬಿ.ಗೆ ರಾಜಕೀಯ ನೇತೃತ್ವದ ಅಧಿಕಾರ ಇರುವುದಿಲ್ಲ. ಸಾಲ್ಕಿಯಾ ಪ್ಲೀನಂ ಬಂಗಾಲದ ಮುಖ್ಯಮಂತ್ರಿಯವರನ್ನು ಪಿ.ಬಿ.ಯಿಂದ ತೆಗೆಯಲಿಲ್ಲವೆಂಬುದನ್ನು ಯೋಚಿಸಬೇಕು.

ಸಾಲ್ಕಿಯಾದಲ್ಲಿ ತೆಗೆದುಕೊಂಡ ಒಂದು ಮುಖ್ಯ ತೀರ್ಮಾನ ಒಂದು ಸೈದ್ಧಾಂತಿಕ ತ್ರೈಮಾಸಿಕವೊಂದನ್ನು ಆರಂಭಿಸಬೇಕೆಂದಿದ್ದು ಅದನ್ನು ಕಲ್ಕತ್ತಾದ ಮಹಾಧಿವೇಶನದಮೊದಲು ಪ್ರಾರಂಭಿಸಲಾಯಿತು- ಅದು ಅನೇಕ ಹೊಸ ಸೈದ್ಧಾಂತಿಕ ಪ್ರಶ್ನೆಗಳನ್ನು ಕುರಿತು ಮತ್ತು ಭಾರತದಲ್ಲಿರುವ ಕ್ರಾಂತಿಕಾರಿ ಚಳುವಳಿಯ ಅನುಭವಗಳನ್ನು ಕ್ರೋಢಿಕರಿಸಿ ಸೈದ್ಧಾಂತಿಕ ದೃಷ್ಟಿಕೋನವನ್ನು ಮೇಲೆತ್ತಲು ಪ್ರಯತ್ನಿಸುತ್ತಿದೆ.

ಸಾಲ್ಕಿಯಾ ಪ್ಲೀನಂನ ಮತ್ತೊಂದು ಪ್ರಮುಖ ತೀರ್ಮಾನ ಪಕ್ಷದ ಕಾರ್ಯಕರ್ತರಿಗೆ ರಾಜಕೀಯ ಶಾಲೆಯನ್ನು ಆರಂಭಿಸುವುದು. ಈ ತೀರ್ಮಾನದ ಪ್ರಕಾರ ಎಲ್ಲಾ ರಾಜ್ಯಗಳ ಆಯ್ದ ಸಂಗಾತಿಗಳಿಗೆ ಕೇಂದ್ರದಲ್ಲಿ ಇಂಗ್ಲೀಷ್ ಹಾಗೂ ಹಿಂದಿಯಲ್ಲಿ ಶಾಲೆಗಳನ್ನು ನಡೆಸಲಾಯಿತು. ಈ ಶಾಲೆಯಲ್ಲಿನ ಪಾಠಗಳನ್ನು ಪುಸ್ತಕ ರೂಪದಲ್ಲಿಯೂ ಪ್ರಕಟಿಸಲಾಗಿದೆ. ಅಲ್ಲದೆ ವಿದ್ಯಾರ್ಥಿಗಳಿಗೆ ಹಾಗೂ ಸಾಮೂಹಿಕ ಸಂಘಟನೆಗಳಲ್ಲಿ ಕೆಲಸ ಮಾಡುವವರಿಗೆ ಶಾಲೆಗಳನ್ನು ನಡೆಸಲಾಯಿತು. ಕೇರಳದಲ್ಲೂ ಹಾಗೂ ಇತರೆಡೆಗಳಲ್ಲೂಪಿ.ಬಿ. ಹಾಗೂ ಸಿ.ಸಿ ಸದಸ್ಯರಿಂದ ಶಾಲೆಗಳನ್ನು ನಡೆಸಲಾಗಿದೆ. ಈ ಶಾಲೆಗಳಿಂದ ಆರಂಭವಾಗಿ ಹಲವಾರು ರಾಜ್ಯಗಳಲ್ಲಿ ರಾಜ್ಯಮಟ್ಟದ ಶಾಲೆಗಳನ್ನು ನಡೆಸಲಾಗಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳು, ಗೊಂದಲಗಳು ಉದ್ಭವಿಸಿದಾಗ ಕೇಂದ್ರ ನಾಯಕತ್ವ ಸಕಾಲದಲ್ಲಿ ಮಧ್ಯಪ್ರವೇಶಿಸಿದೆ.

ಸಾಲ್ಕಿಯಾ ಪ್ಲೀನಂ ನಂತರ ತೀವ್ರವಾದ ಪಕ್ಷದ ಆಂತರಿಕ ಹೋರಾಟ ನಡೆದುದು ಕೇಂದ್ರದಲ್ಲಿ ಜನತಾಪಕ್ಷ ಸರಕಾರ ಅಧಿಕಾರದಿಂದ ಇಳಿದ ಪ್ರಸಂಗದಲ್ಲಿ 1982ರ ಜನವರಿಯಲ್ಲಿ ಸೇರಿದ ವಿಜಯವಾಡ ಅಧಿವೇಶನದಲ್ಲಿ ಅತ್ಯುಗ್ರವಾದ ಒಡಕು ಉಂಟಾಗಬಹುದೆಂದು ಪಕ್ಷದ ಶತ್ರುಗಳು ನಿರೀಕ್ಷೆ ಮಾಡುತ್ತಿದ್ದರು. ಪಕ್ಷಕ್ಕೆ ಹತ್ತಿರದವರಿಗೆ ಭಯವು ಆಗಿತ್ತು.

ಕಲ್ಕತ್ತಾ ಮಹಾಧಿವೇಶನಕ್ಕೆ ಮೊದಲು ಹಾಗೂ ನಂತರ ಇದೇ ರೀತಿಯಲ್ಲಿ ಒಂದು ಒಡಕು ಕೇರಳದಲ್ಲಿ ಆಗುತ್ತದೆಂದು ಪಕ್ಷದ ಶತ್ರುಗಳು ಮಹಾದಾಸೆಯಿರಿಸಿ ಕೊಂಡಿದ್ದರು. ಪಕ್ಷದ ಹಿತಚಿಂತಕರು ಭಯಪಟ್ಟಿದ್ದರು. ಇದಲ್ಲದೆ ರಾಜಸ್ತಾನ ಹಾಗೂ ಬಿಹಾರಕ್ಕೆಸೇರಿದ ಕೆಲವು ಕೇಂದ್ರ ಸಮಿತಿ ಸದಸ್ಯರು ಪಕ್ಷದ ಧೋರಣೆಗೆದುರಾಗಿ ಕಲಹದ ಬಾವುಟವನ್ನು ಎತ್ತಿದರು.

ಈ ಎಲ್ಲಾ ಪ್ರಸಂಗಗಳಲ್ಲಿಯೂ ಪಕ್ಷದ ಐಕ್ಯತೆಯನ್ನು ಕಾಪಾಡುವುದು ಹಾಗೂ ಬಲಪಡಿಸುವುದು ಸಾಧ್ಯವಾಗಿದ್ದು ಒಂದು ಸಂಘಟಿತ ನಾಯಕತ್ವ ಪಕ್ಷದ ಕೇಂದ್ರಲ್ಲಿವದ್ದುದರಿಂದಲೇ.

ಇಲ್ಲಿ ಒಂದು ಪ್ರಶ್ನೆಯನ್ನು ವಿಶೇಷವಾಗಿ ಎತ್ತಿತೋರಿಸಬೇಕಾಗಿದೆ. ಒಂದು ನಿಜವಾದ ಕಮ್ಯುನಿಸ್ಟ್ ಪಕ್ಷವನ್ನು ಮೇಲಿನಿಂದ ಅಂದರೆ ಪಕ್ಷದ ಕೇಂದ್ರದಿಂದ ಮಾತ್ರವೇ ಯಶಸ್ವಿಯಾಗಿ ಕಟ್ಟಲು ಸಾಧ್ಯ. ಇದರ ಅರ್ಥ ಕೆಳಗಿನಿಂದಲೂ ಏನೂ ಇಲ್ಲದೆ ಮೇಲಿನಿಂದ ಮಾತ್ರವೇ ಕಟ್ಟುತ್ತಾರೆ ಎಂದಲ್ಲ ಅತಿ ಕೆಳಗೆ ಇರುವ ಶಾಖೆಯಿಂದ ಆರಂಭವಾಗಿ ವಿವಿಧ ಘಟಕಗಳು ನಡೆಸುವ ನಿರಂತರವಾದ ಕೆಲಸಗಳು, ಅದರಿಂದುಂಟಾಗುವ ಅನುಭವಗಳು, ಅದನ್ನು ಸ್ವೀಕರಿಸಲು ಕೇಂದ್ರಕ್ಕಿರುವ ಸಾಮರ್ಥ್ಯ' ಕೆಲಸ ಮಾಡುವ ಸಮಯದಲ್ಲಿ ಸಂಗಾತಿಗಳಿಗೆ ಎದುರಾಗುವ ಪ್ರಶ್ನೆಗಳಿಗೆ ಪರಿಹಾರ ಕಂಡುಹಿಡಿಯುವುದರಲ್ಲಿ ನಾಯಕತ್ವದ ಸಾಫಲ್ಯ ಇದೆಲ್ಲಾ ಸೇರಿದರೆ ನಿಜವಾದ ಪಕ್ಷ ಬೆಳೆಯಲು ಸಾಧ್ಯ, ಈ ಕೆಲಸದಲ್ಲಿ ನಾಯಕ, ಘಟಕ ವಹಿಸುವ ಪಾತ್ರ ಪ್ರಧಾನವಾದುದು ಎಂದಷ್ಟೇ "ಮೇಲಿನಿಂದ ಪಕ್ಷವನ್ನು ಕಟ್ಟುವುದು" ಎನ್ನುವ ಮಾತಿನ ಅರ್ಥ.

ಆದರೆ ಸಾಲ್ಕಿಯಾ ಪ್ಲೀನಂನಲ್ಲಿಹೇಳಿದ, ನೀವು ಎತ್ತಿ ತೋರಿಸಿದ ಪ್ರಶ್ನೆ ಸದೃಢವಾದ ಕೇಂದ್ರ ಎಂಬುದು ಪ್ರತ್ಯೇಕವಾಗಿ ನಿಲ್ಲುವುದಲ್ಲ, ಶಾಖೆಯವರೆಗೂ ಇರುವ ಕೆಳ ಘಟಕಗಳ ಜೊತೆ ನಿರಂತರವಾದಕೆಲಸವಿಲ್ಲದೇ ಶಕ್ತವಾಗಲು ಸಾಧ್ಯವಿಲ್ಲ. ಒಂದೇ ನಿಲುಮೆಯುಳ್ಳ ಪಕ್ಷದ ಘಟಕಗಳು ಸಂಘಟಿತವಾಗಿ ನಡೆಸುವ ಕೆಲಸಗಳು, ಮುಕ್ತವಾದ ವಿಮರ್ಶೆ ಹಾಗೂ ಸ್ವವಿಮರ್ಶೆಗಳು ಮೊದಲಾದವುದಕ್ಕೆ ನಾಯಕತ್ವ ನೀಡುವುದರ ಜೊತೆ ಜೊತೆಯಲ್ಲಿಯೇ ಮೇಲಿನಿಂದ ಪಕ್ಷವನ್ನು ಕಟ್ಟೋಣ ಎಂಬ ಅರ್ಥ ಇದರಲ್ಲಡಗಿದೆ. ಕೆಳಘಟಕಗಳಿಗೆದುರಾಗುವ ಪ್ರಶ್ನೆಗಳನ್ನು ಕಡೆಗಣಿಸಿ ಪಕ್ಷದ ಕೇಂದ್ರ ಸಂಘಟನೆಯನ್ನು ಕಟ್ಟುವುದು ಸಾಧ್ಯವಿಲ್ಲ. ಈ ವಾಸ್ತವವನ್ನು ಗಣನೆಗೆ ತೆಗೆದುಕೊಂಡೇ ಸಾಲ್ಕಿಯಾ ಪ್ಲೀನಂ ನಂತರ ಪಕ್ಷದ ಕೇಂದ್ರ ಕೆಲಸ ಮಾಡುತ್ತಿದೆ. ●

ಸೆಪ್ಟೆಂಬರ್ ಪಿಕೆಟಿಂಗ್‌ಗಾಗಿ ಮುನ್ನಡೆಯುತ್ತಿರುವ ರೈತ ಸಂಘ

ಸೌದತ್ತಿ

ಕರ್ನಾಟಕ ಪ್ರಾಂತ ರೈತಸಂಘದ ಸೌದತ್ತಿ ತಾಲೋಕು ಸಮಿತಿ ಪದಾಧಿಕಾರಿಗಳ ಸಭೆ ಆಗಸ್ಟ್ 9ರಂದು ಎಸ್. ಆರ್. ಸೊನ್ನದ ಅವರ ಅಧ್ಯಕ್ಷತೆಯಲ್ಲಿ ಸೇರಿತು. ಸೆಪ್ಟೆಂಬರ್ 7–13ರ ಚಳುವಳಿ ಯಶಸ್ವಿಗೊಳಿಸಲು 15 ದಿನಗಳ ಕಾಲ 50 ಗ್ರಾಮಗಳಿಗೆ ಕಾಲ್ನಡಿಗೆ ಜಾಥಾ' ಘಟಕ ಸ್ಥಾಪನೆ. ಸಂಘಟನೆಗೆ 50 ವರ್ಷ ತುಂಬಿದ ಸವಿನೆನಪಿಗಾಗಿ 5 ತಾಲೋಕಿನಲ್ಲಿ ರೈತಸಂಘ ವಿಸ್ತರಿಸಿ 5,000 ಸದಸ್ಯತ್ವ ನೊಂದಾವಣಿ 7 ರಿಂದ 13ರ ವರೆವಿಗೆ ಪ್ರತಿದಿನ :00 ಮಂದಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾಗುವ ತೀರ್ಮಾನಕ್ಕೆಗೊಂಡಿದೆ.

ಕೃಷಿ ಕೂಲಿಗಾರರ ಜಾಥಾ; ಧರಣಿ

ಸೌದತ್ತಿ ತಾಲೋಕು ಹಂಚಿನಾಳ ಹಾಗದ ಚಿಕ್ಕುಂಬಿ ಗ್ರಾಮಗಳ ಸಿವೇಶನ ರಹಿತರ ಹಾಗೂ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘಟನೆ ಸಂಯುಕ್ತ ಆಶ್ರಯದಲ್ಲಿ ಜುಲೈ 25ರಂದು 10 ಕಿ.ಲೋ.ಮೀಟರ ಕಾಲ್ನಡಿಗೆ ಜಾಥಾದಲ್ಲಿ 145 ಮಂದಿ ರೈತ-ಕೃಷಿ ಕೂಲಿಗಾರರು ಭಾಗವಹಿಸಿದ್ದರು. ಜಾಥಾದ ಪ್ರಾರಂಭದಲ್ಲಿ ಹಂಚಿನಾಳದಲ್ಲಿ ನಡೆದ ಸಭೆಯಲ್ಲಿ ವೈ. ಎಚ್ ಗೋವಣ್ಣವರ, ಎಲ್.ಎಸ್.ಗೋವಣ್ಣವರ, ಎಸ್.ಬಿ.ಚಿಲಕವಾಡ, ಶ್ರೀಮತಿ ಫಕೀರವ್ವ ಶಿಡ್ಲಣ್ಣವರ, ಗುಡನಾಯ್ಕ ಮುಂತಾದವರು ಮಾತನಾಡಿದರು. ಶ್ರೀ. ಯಲ್ಲಪಗೌಡ್ರು ಪಟೀಲರು ಅಧ್ಯಕ್ಷತೆ ವಹಿಸಿದ್ದರು. ನಂತರ ಮಂಡಲ ಪ್ರಧಾನ ಉಪ-ಪ್ರಧಾನರಿಗೆ ಮನವಿ ಅರ್ಪಿಸಲಾಯಿತು. ಎಲ್. ಎಸ್ ನಾಯ್ಕ ಹಾಗೂ ತೋರಗಲ್ಲ ಜಾಥಾ ನೇತೃತ್ವ ವಹಿಸಿದ್ದರು.

ದೇವದುರ್ಗ

ಜುಲೈ 2 ರಂದು ದೇವದುರ್ಗ ತಾಲ್ಲೋಕಿನ ಮಸರಕಲ್‌ಗ್ರಾಮದಿಂದ ಹೊರಟ ರೈತರ ಕಾಲ್ನಡಿಗೆ ಜಾಥಾವನ್ನು ಕಾ॥ಪುರುಷೋತ್ತಮ ಕಲಾಲ್ ಬಂಡಿಯವರು ಉದ್ಘಾಟಿಸಿದರು. ರೈತರ 12ಬೇಡಿಕೆಗಳ ಕುರಿತು ಅವರು ವಿವರಿಸಿದರು. ಭಾರತ ವಿದ್ಯಾರ್ಥಿ ಫೆಡರೇಷನ್ ಮುಖಂಡ ಕಾ॥ರಾಮನಗೌಡ ಬೆಂಬಲಿಸಿ ಮಾತನಾಡಿದರು. ತಾಲ್ಲೋಕು ರೈತಸಂಘದ ಸಂಚಾಲಕ ಕಾ॥ಕರಿಯಪ್ಪ ತಾಲ್ಲೋಕಿನ ರೈತರು ಹೋರಾಟದ ಬಗ್ಗೆ ವಿವರಿಸಿದರು. ಕಾಲ್ನಡಿಗೆ ಜಾಥಾ ಚಿಂತರಕುಂಬಿ, ತಪ್ಪಡಿ, ಕಾಟಮಳಿ, ಜೆರದಬಂಡಿ, ಶಿವಂಗಿ ಗ್ರಾಮಗಳಲ್ಲಿ ಸಭೆಗಳನ್ನು ನಡೆಸಿ ಮುನ್ನಡೆಯುತ್ತಿದೆ. ಜಾಥಾವನ್ನು ರೈತರು ಡೊಳ್ಳುವಾದ್ಯಗಳ ಮೂಲಕ ಉತ್ಸಾಹದಿಂದ ಸ್ವಾಗತಿಸಲಾಗುತ್ತಿದೆ. ತಾಲ್ಲೋಕಿನ 170 ಗ್ರಾಮಗಳಿಗೆ ಜಾಥಾ ಏರ್ಪಡಿಸಲಾಗಿದೆ.

ಚಿಂತಾಮಣಿ

ತಾಲ್ಲೋಕು ಪ್ರಾಂತ ರೈತ ಸಂಘದ ಆಶ್ರಯದಲ್ಲಿ ರೈತಸಂಘದ ಕಾರ್ಯಕರ್ತರು ಆಗಸ್ಟ್ 14ರಿಂದ ಸೆಪ್ಟೆಂಬರ್ 5ರ ವರೆಗೆ ಮುಂಗಾನಹಳ್ಳಿ, ಮುರಗಮಲ್ಲಾ, ಕಸಬಾ, ಚಿಲಕಲನೇರ್ಪು, ಹೋಬಳಿಗಳಲ್ಲಿ ಕಾಲ್ನಡೆ ಜಾಥಾವನ್ನು ಏರ್ಪಡಿಸಿ ಹಳ್ಳಿ ಹಳ್ಳಿಗಳಲ್ಲಿ ರೈತ ಸಭೆಗಳನ್ನು ನಡೆಸಿ "ಜೈಲ್ ಭರೋ" ಚಳುವಳಿಯನ್ನು ಯಶಸ್ವಿಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ.

ಜುಲೈ 28 ರಂದು ದೇವದುರ್ಗ ತಾಲೋಕಿನ 300 ಮಂದಿ ಕೃಷಿಕೂಲಿಗಾರರು ಅಖಿಲ ಭಾರತ ಕೃಷಿಕೂಲಿಗಾರರ ಸಂಘದ ನೇತೃತ್ವದಲ್ಲಿ ಅರಣ್ಯ ಭೂಮಿ, ಪಢಾಭೂಮಿ, ಗೈರಾಣ ಭೂಮಿ, ನೀಲಗಿರಿ ಸಸಿ ನೆಡದಂತೆ, ತಗ್ಗು ಹಾಕಿಸದಂತೆ ತಡೆಗಟ್ಟಲು ಹಾಗೂ ಪಟ್ಟನೀಡಲು ಒತ್ತಾಯಿಸಿ ಮೆರವಣಿಗೆ ನಡೆಸಿದರು. ಕೃಷಿಕೂಲಿಗಾರರ 200ಅರ್ಜಿಗಳನ್ನು ತಹಸೀಲ್ದಾರ್‌ರವರಿಗೆ ಅರ್ಪಿಸಿದರು. ಕಾ॥ಜಿ.ಬಸವರಾಜ ಹಾಗೂ ಕಾ॥ಕರಿಯಪ್ಪನೇತೃತ್ವ ವಹಿಸಿದ್ದರು. ನಂತರ ನಡೆದ ಸಭೆಯಲ್ಲಿ ಮಾತನಾಡಿ ಸೆಪ್ಟಂಬರ್ ಚಳುವಳಿ ಯಶಸ್ವಿಗೊಳಿಸಲು ಕರೆನೀಡಿದರು.

ಮಂಗಳೂರು

ಆಗಸ್ಟ್ 6ರಂದು ಕುಪ್ಪೆಪದವು ಪ್ರದೇಶ ರೈತಸಂಘದ ಸಭೆ ಕಾ॥ ಧೂಮಣ್ಣಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಆಗಸ್ಟ್ 11 ರಿಂದ ಹಳ್ಳಿಗಳಿಗೆ ಜಾಥಾ ಹೋಗಲು ಸೆಪ್ಟಂಬರ್ 9 ರಂದು ಮಂಗಳೂರು ತಾಲ್ಲೂಕಿನ ಪಿಕೆಟಿಂಗ್‌ನಲ್ಲಿ ಭಾಗವಹಿಸಿ ಯಶ್ವಸಿಗೊಳಿಲು ತೀರ್ಮಾನಿಸಿತು. ಸಂಘದ ಕಾರ್ಯದರ್ಶಿ ಕಾ॥ನೀಲಯ ನಾಯ್ಕರವರು ಸ್ವಾಗತಿಸಿ ಖಜಾಂಚಿ ಕಾ।ವಾಸುದೇವ ಆಚಾರಿ ಧನ್ಯವಾದವನ್ನು ಅರ್ಪಿಸಿದರು.

ರೈತ ಹುತಾತ್ಮ ದಿನಾಚರಣೆ

1980ರಲ್ಲಿ ಕರ್ನಾಟಕ ರಾಜ್ಯದಾದ್ಯಂತ ರೈತ ಚಳುವಳಿಯ ಮಹಾಪೂರಕ್ಕೆ ಸ್ಫೂರ್ತಿಯ ಬುನಾದಿಯನ್ನಿಟ್ಟ ಮಲಪ್ರಭಾ ರೈತ ಹೋರಾಟದಲ್ಲಿ ಮಡಿದು ಹುತಾತ್ಮರಾದ ಶ್ರೀ ಬಸಪ್ಪಾಲಕ್ಕುಂಡಿ, ಅಳಗವಾಡಿ ಮತ್ತು ಈರಪ್ಪಾ ಕಡ್ಲಿಕೊಪ್ಪ ಬೆಕ್ಕನರಗುಂದರವರ ಸವಿನೆನಪಿಗಾಗಿ ಜುಲೈ 21 ರಂದು ಮಲ್ಲೂರ ಘಟಕ 'ಹುತಾತ್ಮರ ದಿನಾಚರಣೆ'ಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮಲ್ಲೂರ ಘಟಕದ ಅಧ್ಯಕ್ಷರು ವಹಿಸಿದ್ದರು.

ಅಖಿಲ ಭಾರತ ಸಣ್ಣ ಕಾಫಿ ಬೆಳೆಗಾರರ ಸಮಾವೇಶ

ದಿನಾಂಕ 23 ರಂದು ಕೇರಳದ ವೈನಾಡು ಜಿಲ್ಲೆಯ ಕಲ್ಪೇಟ್ಟಾದಲ್ಲಿ ನಡೆದ ಸಣ್ಣ ಕಾಫಿ ಬೆಳೆಗಾರರ ಸಮಾವೇಶ ಕಾಫಿ ಬೆಳೆಗಾರರ ಸಮಸ್ಯೆಗಳನ್ನೆತ್ತಿ ಅಖಿಲ ಭಾರತ ಹೋರಾಟ ರೂಪಿಸಲು ಮಾಡಿದ ಮೊದಲ ಪ್ರಯತ್ನ. ವೈನಾಡಿನ ಸಣ್ಣ ಕಾಫಿ ಬೆಳಗಾರರು ಅವಿರತವಾಗಿ ಮಾಡುತ್ತಿರುವ ಹೋರಾಟ ಫಲಪ್ರದವಾಗಬೇಕಾದರೆ ಭಾರತದ ಎಲ್ಲಾ ಕಾಫಿ ಬೆಳೆಗಾರರನ್ನು ಜೊತೆಗೆ ಸೇರಿಸಿಕೊಳ್ಳಬೇಕೆಂಬ ಸಲಹೆ ನೀಡಿದರು ಸಿ.ಕೆ.ಸಿ. ಸದಸ್ಯರಾದ ಕಾಂ. ರಾಮಚಂದ್ರರಾವ್‌ರವರು. ಒಂದು ತಿಂಗಳ ಹಿಂದೆ ವೈನಾಡಿನ ಸುಲ್ತಾನ್ ಬಕೇರಿಯಲ್ಲಿ ನಡೆದ ಕೇರಳದ ಕಾಫಿ ಬೆಳೆಗಾರರ ಸಮ್ಮೇಳನದಲ್ಲಿ ನೀಡಲಾದ ಈ ಸಲಹೆಯನ್ನು ಅಂಗೀಕರಿಸಿ ನಡೆಸಿದ ಸಮಾವೇಶ ಇದು. ಈ ಸಮ್ಮೇಳನವನ್ನು ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿಗಳೂ ಕೇರಳ ಸರಕಾರದ ಸಹಕಾರಿ ಸಚಿವರೂ ಆದ ಕಾಂ.ಟಿ.ಕೆ. ರಾಮಕೃಷ್ಣನವರು ಉದ್ಘಾಟಿಸಿದರು. ಕಾಂ. ಪಿ. ರಾಮಚಂದ್ರರಾವ್ ರವರು ಅಧ್ಯಕ್ಷತೆ ವಹಿಸಿ ನಡೆಸಿಕೊಟ್ಟ ಈ ಸಮಾವೇಶದಲ್ಲಿ ವೈನಾಡು ಜಿಲ್ಲಾ ಕರ್ಷಕ ಸಂಘದ ಪ್ರ.ಕಾರ್ಯದರ್ಶಿ ಕಾ.ಟಿ. ಎಸ್.ರಾಧಾಕೃಷ್ಣನ್ 15 ಬೇಡಿಕೆಗಳ ನಿರ್ಣಯವನ್ನು ಮಂಡಿಸಿದರು. ಇದನ್ನು ಬೆಂಬಲಿಸಿ ತಮಿಳುನಾಡಿನ ಕಾ|| ಚೆಲುವಯ್ಯ,ಕರ್ನಾಟಕದಿಂದ ಕಾಂ.ಜಿ.ಎನ್. ನಾಗರಾಜ್ ಮಾತನಾಡಿದರು. ಕರ್ನಾಟಕದ ಪ್ರತಿನಿಧಿಗಳಲ್ಲಿ ಕಾಂ. ಕೃಷ್ಣಕುಮಾರ್, ಕಾಂ.ನಾರಾಯಣ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು.

ಸುರಿದ ಮಳೆಯಲ್ಲಿಯೇ ನಡೆದ ರ್ಯಾಲಿಯ ನಂತರ ಬಹಿರಂಗ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದ ಕಾಂ. ಪಿ. ರಾಮಚಂದ್ರರಾವ್‌ರವರು ಇಂದು ಎಂದೂ ಇಲ್ಲದ ಬಿಕ್ಕಟ್ಟಿನ ಪರಿಸ್ಥಿತಿಗೆ ನಮ್ಮ ದೇಶ ಸಿಕ್ಕಿದೆ. ಬೊಫೋರ್ಸ್ ಮೊದಲಾದ ಭ್ರಷ್ಟಾಚಾರ ಪ್ರಕರಣಗಳಿಂದ ರಾಜೀವ್ ಗಾಂಧಿ ಸರ್ಕಾರ ಜನರ ನಂಬಿಕೆಯನ್ನು ಕಳೆದು ಕೊಂಡಿದೆ. ಅದೇ ಸಮಯದಲ್ಲಿ ದೇಶದ ಐಕ್ಯತೆಗೆ ದೊಡ್ಡ ಪೆಟ್ಟು ಬಿದ್ದಿದೆ. ಕೇರಳ ರಾಜ್ಯ ದೇಶದ ಐಕ್ಯತೆ ಹಾಗೂ ಸಮಗ್ರತೆಯನ್ನು ಕಾಪಾಡುವುದು ಹೇಗೆಂಬ ಬಗ್ಗೆ ದೇಶಕ್ಕೆ ದಾರಿ ತೋರಿದೆ. ಕೋಮುವಾದಿ ಶಕ್ತಿಗಳನ್ನು ಪ್ರತ್ಯೇಕಿಸಿ ಜಾತ್ಯಾತೀತ ಶಕ್ತಿಗಳಿಗೆ ಎಲ್. ಡಿ. ಎಫ್.ಗೆ ಜಯ ದೊರಕಿಸಿ ಕೊಟ್ಟದ್ದು ಇಡೀ ದೇಶಕ್ಕೆ ಮಾದರಿಯಾದರೆ ಆಗಸ್ಟ 15 ರಂದು ದೇಶದ ಐಕ್ಯತೆ ಹಾಗೂ ಸಮಗ್ರತೆಗಾಗಿ ಬಲಿದಾನ ಮಾಡಲು ಸಿದ್ಧರಿದ್ದೇವೆ ಎಂದು ಅಪೂರ್ವ ಮಾನವ ಸರಪಳಿ ನಿರ್ಮಿಸಿದ್ದು ಕೂಡ ಮತ್ತೊಮ್ಮೆ ದೇಶಕ್ಕೇ ಮಾದರಿಯಾಗುವಂತಾಗಿದೆ. ಇಡೀ ದೇಶದ ಕಾರ್ಮಿಕರು, ರೈತರು, ಯುವಕರು, ವಿದ್ಯಾರ್ಥಿಗಳು, ಮಹಿಳೆಯರು ಎದ್ದು ನಿಂತು ತಮ್ಮ ಬೇಡಿಕೆಗಳಿಗಾಗಿ ಹೋರಾಡಿದರೆ ಮಾತ್ರ ಈ ಪರಿಸ್ಥಿತಿ ತಪ್ಪುತ್ತದೆ. ಭಾಷಾ ಬೇಧಗಳನ್ನು ಮರೆತು ಮಲಯಾಳಿ, ಕನ್ನಡ, ತಮಿಳು, ತೆಲುಗು ಮಾತನಾಡುವ ಎಲ್ಲಾ ರೈತರೂ ಒಟ್ಟುಗೂಡಿ ಹೋರಾಡಿದರೆ ಮಾತ್ರ ಈ ಐಕ್ಯತೆ ನಿರ್ಮಿಸಲು ಸಾಧ್ಯ. ಕಾಫಿ ಬೋರ್ಡ್ ಕಾಫಿ ಬೆಳೆಗಾರರ ಜೀವ ಹಿಂಡುತ್ತಿದೆ. ಈ ಕಾಫಿ ಬೋರ್ಡ್‌ನ 27 ಜನ ನಿರ್ದೇಶಕರಲ್ಲಿ ಶೇ. 98 ಭಾಗವಾಗಿರುವ ಸಣ್ಣ ಕಾಫಿ ಬೆಳೆಗಾರರ ಪ್ರತಿನಿಧಿಗಳೆಷ್ಟು ಮಂದಿ ಇದ್ದಾರೆ ಎಂದು ಪ್ರಶ್ನಿಸಿದ ಅವರು 15 ಬೇಡಿಕೆಗಳನ್ನು ವಿವರಿಸಿ ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸಿದರು.

ಈ ಸಮಾವೇಶ ಅಕ್ಟೋಬರ್ 12 ರಂದು ಎಲ್ಲಾ ಕಾಫಿ ಬೆಳೆಯುವ ರಾಜ್ಯಗಳ ಸಣ್ಣ ಕಾಫಿ ಬೆಳೆಗಾರರು ಬೆಂಗಳೂರಿನ ಕಾಫೀ ಬೋರ್ಡ್ ಕಛೇರಿಯ ಎದುರು ಧರಣಿ ಸತ್ಯಾಗ್ರಹ ನಡೆಸಬೇಕೆಂದು ನಿರ್ಧರಿಸಿದೆ. ಸಣ್ಣ ಕಾಫಿ ಬೆಳೆಗಾರರ ಚಳುವಳಿಯ ರೂಪು ರೇಷೆಗಳನ್ನು ನಿರ್ಧರಿಸಿ ನಾಯಕತ್ವ ನೀಡಲು ಮೂರು ರಾಜ್ಯಗಳ ರೈತ ಸಂಘಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳನ್ನೊಳಗೊಂಡ ಆಕ್ಷನ್ ಕಮಿಟಿಯನ್ನು ಆರಿಸಿದೆ.

○

ಸಿಂಧನೂರು ಬಂದ್

ಸಿಂಧನೂರಿಗೆ ಭೇಟಿ ನೀಡಿದ ಯಾರಿಗಾದರೂ ಅಲ್ಲಿಯ ಕುಡಿಯುವ ನೀರಿನ ಅವ್ಯವಸ್ಥೆ ಮನಸ್ಸನ್ನು ಕಾಡದಿರಲು ಸಾಧ್ಯವೇ ಇಲ್ಲ. ಕೊಳೆತು ನಾರುತ್ತಿರುವ ಹಳ್ಳವೊಂದರಿಂದ ಶುದ್ಧೀಕರಣಗೊಳ್ಳದೆ ಬರುವ ಈ ನೀರು ಅತ್ಯಂತ ಹೊಲಸಾಗಿದ್ದು ಇಡೀ ಪಟ್ಟಣದ ಜನರನ್ನು ರೊಚ್ಚಿಗೆಬ್ಬಿಸಿದೆ. ಸಿ.ಪಿ.ಐ. (ಎಂ) ನೇತೃತ್ವದಲ್ಲಿ 20 ಸಂಘ ಸಂಸ್ಥೆಗಳು ಜೂ 16ರಿಂದ ಹಂತ ಹಂತವಾಗಿ ನಡೆಸಿದ ಹೋರಾಟ ಕೊನೆಗೆ 'ಸಿಂಧನೂರು ಬಂದ್'ನಲ್ಲಿ ಕೊನೆ ಮುಟ್ಟಿತು. ಆಗಸ್ಟ 8ರಂದು ನಡೆದ ಈ ಬಂದ್ ಅಪೂರ್ವಯಶಸ್ಸನ್ನು ಕಂಡಿತು. ಕುಡಿಯುವ ನೀರು ವ್ಯವಸ್ಥಿತ ಚರಂಡಿ, ಇತ್ಯಾದಿ ನಾಗರೀಕ ಸೌಲಭ್ಯಗಳಿಂದ ವಂಚಿತರಾದ ವರ್ತಕರು,ಶೇಟುಗಳು ಕೂಡಾ ಬಂದ್‌ಗೆ ಸಹಕರಿಸಿದರುಈಬಂದ್‌ಗೆ ಸಿದ್ಧತೆಯಾಗಿನಗರದಪ್ರತಿ ಪ್ರದೇಶದಲ್ಲಿಯೂ ಪ್ರಾದೇಶಿಕ ಸಭೆಗಳು ನಡೆದರೆ, ಸಮುದಾಯ ತಂಡವು ಸ್ಥಳದಲ್ಲಿಯೇ ನಾಟಕವೊಂದನ್ನು ರಚಿಸಿ, ನಿರ್ದೇಶಿಸಿ 10 ಸ್ಥಳಗಳಲ್ಲಿ ಪ್ರದರ್ಶಿಸಿತು. ಎಲ್ಲಾ ಸಂಘ ಸಂಸ್ಥೆಗಳು ಕರಪತ್ರಗಳನ್ನು ಹಾಕಿ ಬಂದ್‌ಗೆ ಬೆಂಬಲ ಸೂಚಿಸಿದುವು. ಜೂನ್ 16 ರಿಂದ ಧರಣಿ ಸತ್ಯಾಗ್ರಹ, ಉಪವಾಸ ಸತ್ಯಾಗ್ರಹ, ನಡೆಸಿದ ಈ ಹೋರಾಟ ಸಮಿತಿಯನ್ನು ಮಾತುಕತೆಗೆ ಕರೆಸಿದ ಜಿಲ್ಲಾಧಿಕಾರಿ ಇಡೀ ದಿನ ಕಾಯಿಸಿ ಕೊನೆಗೆ ಮಾತುಕತೆ ನಡೆಸದೆ ಕುಳಿರಿಸಿದ್ದನ್ನು ಪ್ರತಿಭಟಿಸಿ ಪಕ್ಷದ ಕಾರ್ಯಕರ್ತರು ಹೊರ ಬಂದರು. ಜಿಲ್ಲಾಧಿಕಾರಿಯ ಈ ಕ್ರಮವನ್ನು ಸಿಂಧನೂರಿನ ನಾಗರೀಕರು ಒಂದು ಸವಾಲೆಂದೇ ಸ್ವೀಕರಿಸಿದ್ದಾರೆ. ಪಕ್ಷದ ನೇತೃತ್ವದಲ್ಲಿ ಆಗಸ್ಟ 26ರಿಂದ ರಸ್ತಾ ರೋಖೋ, ಜೈಲ್ ಭರೋ ಹಾಗೂ ಆಮರಣಾಂತ ಸತ್ಯಾಗ್ರಹಗಳನ್ನು ನಡೆಸಲು ನಿರ್ಧರಿಸಿದ್ದಾರೆ.

○

ದೇಶದ ಪ್ರಗತಿಗಾಗಿ ರೈತ ಹೋರಾಟ

ಎರಡೇ ಸರ್ವೆ ನಂಬರ್‌ನಲ್ಲಿ 5 ಸಾವಿರ ಎಕ್ರೆ ಬಂಜರ ಭೂಮಿ ಹರಕನಾಳ ಗ್ರಾಮದಲ್ಲಿದೆ ಎಂದು ರೈತ ಮುಖಂಡ ಸಕ್ರಿಯಾ ನ್ಯಾಕ ಹೇಳಿದ್ದಾನೆ. ಹಾಗೆಯೇ ಹರಪನಹಳ್ಳಿ ತಾಲೂಕಿನಲ್ಲಿ 37 ಸಾವಿರ ಎಕ್ರೆಗಿಂತಲ್ಲೂ ಹೆಚ್ಚು ಭೂಮಿ ಸರಕಾರಿ ಬಂಜರ ಭೂಮಿಯಾಗಿ ಪಾಳು ಬಿದ್ದಿದೆಂದು ಬಳ್ಳಾರಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ಪರಶುರಾಂ ದಾಖಲೆ ಸಹಿತ ಹೇಳುತ್ತಾರೆ. ಇದರ ಅರ್ಥವೇನು ? ಈ ಹೊತ್ತು ಭೂಮಿ ರೈತನ ಜೀವಾಳ ಪ್ರಶ್ನೆಯಾಗಿದೆ. ಆದರೆ ಸ್ವಾತಂತ್ರ್ಯ ಸಿಕ್ಕಿ 40 ವರ್ಷಗಳಾದರೂ ಕಾಂಗ್ರೆ ಸರಕಾರ ತನ್ನ ಹಿಡಿತದಲ್ಲಿರುವ ಲಕ್ಷಾವಧಿ ಎಕ್ರೆ ಸಿ. ಮತ್ತು ಡಿ. ಭೂಮಿಯನ್ನು ಅಂದರೆ ಬಂಜರು ಮತ್ತು ಅರಣ್ಯ ಭೂಮಿಯನ್ನು ರೈತರಿಗೆ ಹಂಚದೆ ಗ್ರಾಮಾಂತರ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆಯನ್ನು, ಅದರ ಮೂಲಕ ಬಡತನವನ್ನು ಕಾಯಂ ಗೊಳಿಸಿದೆ" ಎಂದು ಸಿ.ಪಿ.ಐ. (ಎಂ) ಮುಖಂಡರಾದ ಎನ್. ಕೆ.ಉಪಾಧ್ಯಾಯರು 20 ರಂದು ಹರಪನಹಳ್ಳಿಯಲ್ಲಿ ರೈತರನ್ನುದ್ದೇಶಿಸಿ ಮಾತನಾಡಿದರು. 7ರಿಂದ 13 ರವರೆಗೆ ದೇಶಾದ್ಯಂತ ಸತ್ಯಾಗ್ರಹದ ಕಾರ್ಯಕ್ರಮ ಕೃಷಿ ಕೂಲಿಗಾರರ ಸಂಘಹಮ್ಮಿಕೊಂಡಿದ್ದು ಅದನ್ನು ಯಶಸ್ವಿಗೊಳಿಸಲು ಸಹಸ್ರ ಸಂಖ್ಯೆಯಲ್ಲಿ ಚಳುವಳಿಯಲ್ಲಿ ಭಾಗವಹಿಸಬೇಕೆಂದು ಕರೆಕೊಟ್ಟರು

ಬಿಜಾಪುರ, ದ.ಕ. ಮೊದಲಾದ ಜಿಲ್ಲೆಗಳಲ್ಲಿ ಈಗಾಗಲೇ ಸಿ. ಮತ್ತು ಡಿ.ಭೂಮಿಯನ್ನು ಆಕ್ರಮಣ ಮಾಡಲಾಗಿದೆಂದೂ, ಆಂಧ್ರದಲ್ಲಿ ಅಂಥ ಚಳುವಳಿ ಪ್ರತಿದಿನ ನಡೆದಿದೆಂದೂ ಕರ್ನಾಟಕ ರಾಜ್ಯಾದ್ಯಂತ ಆ ಚಳುವಳಿಯನ್ನು ತೀವ್ರಗೊಳಿಸಲೇ ಬೇಕೆಂದು ಹೇಳಿದರು.

ಭೂಸುಧಾರಣೆ ಯಶಸ್ವಿಯಾಗಬೇಕಾದರೆ ರೈತ ಸಂಘದ (ರುದ್ರಪ್ಪನದಲ್ಲ) ಹಾಗೆಯೇ ಜನರ ಸಕ್ರೀಯಸಹಕಾರ ಅಗತ್ಯವೆಂದೂ, ಸಿ.ಪಿ.ಐ.(ಎಂ) ಮುಖಂಡತ್ವದ ಪಶ್ಚಿಮ ಬಂಗಾಲದ ಎಡರಂಗ ಸರಕಾರ ಗ್ರಾಮ ಪಂಚಾಯತ್ ಮತ್ತು ರೈತಸಂಘದ ಸಹಾಯದಿಂದ ಹೆಚ್ಚುವರಿ ಭೂಮಿಯನ್ನು ಗುರ್ತಿಸಿ (ಅಂದರೆ 1986 ಡಿಸೆಂಬರ್ ವರೆಗೆ 12055 ಲಕ್ಷ ಎಕರೆ,) ಅದರ ಪೈಕಿ 8.33ಲಕ್ಷ ಎಕ್ರೆಯನ್ನು 3.27 ಲಕ್ಷಭೂಹೀನ ಗುಡ್ಡಗಾಡು ಜನರಿಗೂ 6.38ಲಕ್ಷ ಹರಿಜನರಿಗೂ ಹಂಚಿದೆ. ಹಾಗೆಯೇ ಪಾಲಿಗಾಗಿ ದುಡಿಯುವ (ಟೆನೆಂಟ್ಸ್) 13.6ಲಕ್ಷ ರೈತರನ್ನು ಈಗಾಗಲೇ ಗುರ್ತಿಸಿದೆ. ಸರಕಾರಿ ಹೆಚ್ಚುವರಿ ಭೂಮಿಯನ್ನು ಹಂಚಿದೆ. ತನ್ನ ಭೂಸುಧಾರಣಾ ಕಾನೂನಿಗೆ ತಿದ್ದುಪಡಿ ಮಾಡಿ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡು ಭೂಹೀನ ರೈತರಿಗೆ ಹಂಚುವ ಕಾರ್ಯವನ್ನು ಎಡರಂಗ ಸರಕಾರಕ್ಕೆ ಮಾಡಲು ಸಾಧ್ಯವಾಗಿದ್ದರೆ, ಕಾಂಗ್ರೆ, ಜನತಾ, ತೆಲಗುದೇಶಂ ಸರಕಾರಗಳು ಯಾಕೆ ಮಾಡಬಾರದು? ಅದಕ್ಕಾಗಿಯೇ ಈ ಚಳುವಳಿ ರೈತನಿಗೆ ಭೂಮಿ ಸಿಗಬೇಕು, ಹಣದ ಸಹಾಯ ದೊರಕಬೇಕು,ನೀರಾವರಿ ವ್ಯವಸ್ಥೆ ಆಗಬೇಕು. ಕೊನೆಗೆ ಅವ ಬೆಳೆದ ಬೆಳೆಗೆ ನ್ಯಾಯ ಬೆಲೆ ಸಿಗಬೇಕು. ಈ ಬೇಡಿಕೆಗಳನ್ನು ಪಡೆಯುವ ಸಲುವಾಗಿಯೇ ಸೆಪ್ಟೆಂಬರ್ ತಿಂಗಳಲ್ಲಿ ರೈತ ಸಂಘ ಅಖಿಲ ಭಾರತ ಚಳುವಳಿ ನಡೆಸುತ್ತಿದೆ.

ಆದ್ದರಿಂದ ಅಖಿಲಭಾರತ ಕಿಸಾನ ಸಭಾ ಸೆಪ್ಟೆಂಬರ್ ತಿಂಗಳಲ್ಲಿ ನಡೆಸುವ ಚಳುವಳಿ ಬರೀ ರೈತರ ಸಮಸ್ಯೆಗಳಿಗೆ ಮಾತ್ರ ಸೀಮಿತವಾಗಿರದೆ ಇಡೀ ಜನಸಮುದಾಯಕ್ಕೆ ಸಂಬಂಧ ಪಟ್ಟಿದೆ. ಈ ವಿಷಯವನ್ನು ಎಲ್ಲಾ ವರ್ಗದ ಜನರ ಮಧ್ಯೆಕೊಂಡ್ಯೊಯ್ದು,ಪ್ರಚಾರ ಮಾಡಿ, ತಿಳುವಳಿಕೆ ಉಂಟುಮಾಡಿ, ಚಳುವಳಿಗೆ ಹೆಚ್ಚು ಜನ ಬೆಂಬಲ ಸಿಗುವಂತೆ, ಅದು ಯಶಸ್ವಿಯಾಗುವಂತೆ ಮಾಡುವುದು ಅತ್ಯಗತ್ಯವೆಂದು ಉಪಾಧ್ಯಾಯರು ಹೇಳಿದರು.

○

ಪಕ್ಷದ ರಾಜ್ಯಮಟ್ಟದ ಶಾಲೆ

ಎರಡು ತಂಡಗಳಲ್ಲಿ ರಾಜ್ಯದ ಎಲ್ಲಾ ಪೂರ್ಣಾವಧಿ ಕಾರ್ಯಕರ್ತರಿಗೆ ಶಾಲೆ ನಡೆಸಲು ರಾಜ್ಯ ಸಮಿತಿ ಕೈಗೊಂಡ ತೀರ್ಮಾನಕ್ಕೆಅನುಗುಣವಾಗಿ ಮೊದಲ ಶಾಲೆ ಮಂಗಳೂರಿನಲ್ಲಿ ಆಗಸ್ಟ 14 ರಿಂದ 19ರವರೆಗೂ ಯಶಸ್ವಿಯಾಗಿ ನಡೆಯಿತು. ಪಕ್ಷದ ರಾಜ್ಯ ಸಮಿತಿ ಸದಸ್ಯರು, ಜಿಲ್ಲಾ ಸಮಿತಿ, ಪ್ರಾದೇಶಿಕ ಸಮಿತಿ ಕಾರ್ಯದರ್ಶಿಗಳು, ಇವರಿಗಾಗಿ ನಡೆದ ಈ ಶಾಲೆಯಲ್ಲಿ 28 ಮಂದಿ ಭಾಗವಹಿಸಿದ್ದರು.

ಬೋಳಾರದ ಹಂಚಿನ ಕಾರ್ಖಾನೆ ಕಾರ್ಮಿಕ ಸಂಘದಲ್ಲಿ ನಡೆದ ಈ ಶಾಲೆಯಲ್ಲಿ ಪ್ರಥಮವಾಗಿ ಅಂತರರಾಷ್ಟ್ರೀಯ ಪರಿಸ್ಥಿತಿ ಕುರಿತು ಪಕ್ಷದ ಕೇಂದ್ರ ಸಮಿತಿ ಸದಸ್ಯರು ಹಾಗೂರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಪಿ.ರಾಮಚಂದ್ರ ರಾವ್ ರವರು ಉಪನ್ಯಾಸಮಾಡಿ ಇಂದು ಜಗತ್ತಿನಲ್ಲಿ ಪ್ರಮುಖವಾದ ನಾಲ್ಕು ವೈರುಧ್ಯಗಳು, ಜಗತ್ತಿನ ಮೂರು ವಿಭಾಗಗಳ ನಡುವಿನ ಸಂಬಂಧ, ಸಾಮ್ರಾಜ್ಯಶಾಹಿಯ ವಿರುದ್ಧ ಅಂತರರಾಷ್ಟ್ರೀಯ ಕಮ್ಯೂನಿಸ್ಟ ಚಳುವಳಿ, ಅಭಿವೃದ್ಧಿಶೀಲ ದೇಶಗಳ ವಿಮೋಚನಾ ಚಳುವಳಿಗಳು ಹೆಚ್ಚು ಹೆಚ್ಚು ಐಕ್ಯತೆ ಸಾಧಿಸುತ್ತಿರುವುದನ್ನು ವಿವರಿಸಿದರು.

ಎರಡನೆಯ ದಿನ ಪಕ್ಷದ ಕಾರ್ಯಕ್ರಮದ ಕುರಿತು ಕಾಂ|| ಎನ್.ಕೆ.ಉಪಾಧ್ಯಾಯ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಇವರು ಉಪನ್ಯಾಸ ಮಾಡುತ್ತಾ ಪಕ್ಷದಲ್ಲಿ ಕ್ರಾಂತಿಕಾರಿ ಕಾರ್ಯಕ್ರಮವೊಂದು ರೂಪುಗೊಳ್ಳಲು ನಡೆದ ಹೋರಾಟವನ್ನು, ಕಾರ್ಯಕ್ರಮದ ಮುಖ್ಯ ಅಂಶಗಳನ್ನು ವಿವರಿಸಿದರು.

ಮೂರನೆಯ ದಿನ "ಕಾರ್ಯತಂತ್ರದ ದೂರದರ್ಶಿಧೋರಣೆ" (perspective Tactica line) ಬಗ್ಗೆ ಮತ್ತೆ ಉಪನ್ಯಾಸ ನೀಡಿದ ಕಾಂ||ಪಿ. ರಾಮಚಂದ್ರರಾವ್‌ರವರು ಭಾರತದ ಕ್ರಾಂತಿಯ ಪಥ ರಷ್ಯನ್ ಕ್ರಾಂತಿಯ ಪಥವೂ ಅಲ್ಲ ಚೀನಾದ ಕ್ರಾಂತಿಯ ಪಥವೂ ಅಲ್ಲ. ಅದು ಕಾರ್ಮಿಕ ವರ್ಗದ ಹೋರಾಟ ಹಾಗೂ ರೈತರ ಪಾರ್ಟಿಸಾನ್ ಕದನಗಳು ಎರಡು ಕೂಡಿದ ಭಾರತದ್ದೇ ಆದ ಕ್ರಾಂತಿಯ ಪಥವೆಂಬುದನ್ನು ನಿರೂಪಿಸಿದರು.

ಪಕ್ಷದ ಮತ್ತೊಬ್ಬ ಕಾರ್ಯದರ್ಶಿ ಮಂಡಲ ಸದಸ್ಯರಾದ ಕಾಂ||ವಿ.ಜೆ.ಕೆ. ನಾಯರ್‌ರವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಂದ ಬಲ ಪರಿಷ್ಕರಣವಾದ ಹಾಗೂ ಎಡಪಂಥವಾದಿ ತಪ್ಪುಗಳ ಬಗ್ಗೆ ಹಾಗೂ ಭಾರತದಲ್ಲಿ ಪರಿಷ್ಕರಣವಾದಿ ಹಾಗೂ ಎಡಪಂಥವಾದಿ ಧೋರಣೆಗಳ ಬೆಳವಣಿಗೆ ಹಾಗೂ ಅಪಾಯಗಳ ಬಗ್ಗೆ ವಿವರಿಸಿದರು. ಸಿ. ನಂಜುಂಡಪ್ಪನವರು 5ನೇ ದಿನದ ಪಾಠ ಮಾಲಿಕೆಯಲ್ಲಿ ಪಕ್ಷದ ಸಂಘಟನೆ ಕುರಿತು ವಿವರಿಸುತ್ತಾ ಸಂವಿಧಾನ ಮುಖ್ಯ ಅಂಶಗಳನ್ನು ಹಾಗೂ ಸಾಲ್ಕಿಯಾ ಪ್ಲೀನಂನಲ್ಲಿ ಹಾಗೂ ನಂತರ ಪಕ್ಷ ಗುರುತಿಸಿರುವ ಒಕ್ಕೂಟವಾದದ (ಫೆಡರಲಿಸಂ)ನ ಅಪಾಯದ ಬಗ್ಗೆ ವಿವರಿಸಿದರು.

ಆರನೇ ದಿನ ಕಾರ್ಯದರ್ಶಿ ಮಂಡಲದ ಸದಸ್ಯರಾದ ಕಾಂ.ಎಸ್.ಸೂರ್ಯನಾರಾಯಣರಾವ್‌ರವರು ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ನಡುವಿನ ಸಂಬಂಧದ ಬಗ್ಗೆ ಕಾರ್ಮಿಕರಂಗದಲ್ಲಿ ಪಕ್ಷದ ಕರ್ತವ್ಯದ ಬಗ್ಗೆ ವಿವರಿಸಿದರು.

ದ.ಕ.ಜಿಲ್ಲಾ ಸಮಿತಿ ಮಂಗಳೂರಿನಲ್ಲಿ ಸುರಿಯುತ್ತಿದ್ದ ಜೋರು ಮಳೆಯಲ್ಲಿಯೂ ಯಶಸ್ವಿಯಾಗಿ ಶಾಲೆಗೆ ಸಿದ್ಧತೆ ಮಾಡಿತ್ತು.

ವಿದ್ಯಾರ್ಥಿಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ ಚರ್ಚೆ ನಡೆಸಲು ಅವಕಾಶ ಮಾಡಲಾಗಿತ್ತು. ಪ್ರತಿ ದಿನ ರಾತ್ರಿ 8.00 ಗಂಟೆಯಿಂದ 10 ಗಂಟೆಯ ವರೆಗೆ ಚರ್ಚೆನಡೆದು ಮರುದಿನ ಹಿಂದಿನ ದಿನದ ಪಾಠದ ಮೇಲಿನ ಪ್ರಶ್ನೋತ್ತರದಿಂದಆರಂಭವಾಗುತಿತ್ತು.

○

ಪಾಕಿಸ್ತಾನದಲ್ಲೇನು ನಡೆಯುತ್ತಿದೆ ?

ನಮ್ಮ ನೆರೆಯ ದೇಶ ಪಾಕಿಸ್ತಾನದಲ್ಲಿ ಏನು ನಡೆದಿದೆ? ಎಂಬುದು ಎಲ್ಲರೂ ತಿಳಿದುಕೊಳ್ಳಬೇಕಾದ ವಿಷಯು. ಅಲ್ಲಿಯ ಜನ ಏನು ಬಯಸುತ್ತಾರೆ ? ಅಲ್ಲಿಯ ಆಳುವ ವರ್ಗಗಳು ಬಯಸುವುದೇನು ? ಸಾಮ್ರಾಜ್ಯಶಾಹಿಗಳು ಏನು ಮಾಡುತ್ತಿದ್ದಾರೆ ಎಂದು ವಿವರಿಸುತ್ತಾರೆ ಕಾ॥ ಹರ್‌ಕಿಷನ್ ಸಿಂಗ್ ಸುರ್‌ಜೀತ್.

ಸಂಗ್ರಹಾನುವಾದ :
ಎ. ಎಸ್. ಆಚಾರ್ಯ

ಪಾಕಿಸ್ತಾನ ಅಮೇರಿಕಾದಿಂದ ಎವಾಕ್ಸ್ ವಿಮಾನಗಳನ್ನು ಪಡೆದುಕೊಂಡಿದೆ; ಅಮೇರಿಕಾದಿಂದ ಅದಕ್ಕೆ ದೊರೆಯುತ್ತಿರುವ ಧನ ಸಹಾಯ ಅಪಾರ. ಇತ್ತೀಚೆಗೆ ಪಾಕಿಸ್ತಾನ ಅಣು ಶಸ್ತ್ರಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವತ್ತಧಾವುಗಾಲು ಹಾಕುತ್ತಿದೆ. ಈ ಎಲ್ಲಾ ವಿದ್ಯಮಾನಗಳ ಬಗ್ಗೆ ಭಾರತದಲ್ಲಿ ಸಾಕಷ್ಟು ಚರ್ಚೆಗಳಾಗುತ್ತಿವೆ. ಆದರೂ ಈ ಎಲ್ಲಾ ಚರ್ಚೆಗಳಲ್ಲಿ ಮೂರು ಮುಖ್ಯ ಅಂಶಗಳನ್ನು ಸರಿಯಾಗಿ ಗಮನಿಸಲಾಗುತ್ತಿಲ್ಲ. ಮೊದನೆಯದಾಗಿ ಪಾಕಿಸ್ತಾನಕ್ಕೆ ಸಂಬಂಧಪಟ್ಟಂತೆ ಅಮೇರಿಕಾ ಸಾಮ್ರಾಜ್ಯಶಾಹಿಗಳ ಕಾರ್ಯಯೋಜನೆಯಲ್ಲಾಗಿರುವ ಬದಲಾವಣೆ, ಎರಡನೆಯದು ಪಾಕಿಸ್ತಾನದಲ್ಲಿ ಕಾರ್ಯ ಪ್ರವೃತ್ತವಾರುವ ವಿವಿಧ ವರ್ಗ ಶಕ್ತಿಗಳ ಸ್ವರೂಪ, ಮತ್ತು ಕೊನೆಯದಾಗಿ ಕಳೆದ ಮೂರು ದಶಕಗಳಲ್ಲಿ ಆ ದೇಶದಲ್ಲಿ ಬೆಳೆದು ಬಂದಿರುವ ರಾಷ್ಟ್ರೀಯ ಕಾರ್ಮಿಕ ವರ್ಗ ಮತ್ತು ಪ್ರಜಾಸತ್ತಾತ್ಮಕ ಚಳುವಳಿ ಭಾರತದ ವಿಭಜನೆಯಾದ ಮೇಲೆ ಒಂದೇ ದೇಶದ ಎರಡು ಭಾಗಗಳಾದ ಭಾರತ ಮತ್ತು ಪಾಕಿಸ್ತಾನಗಳು ಬೇರೆ ಬೇರೆ ದಿಕ್ಕಿನಲ್ಲಿ ಯಾಕೆ ಸಾಗಿದವು ಎನ್ನುವುದನ್ನು ಅರ್ಥಮಾಡಿಕೊಳ್ಳಲು ಈ ಮೂರು ಅಂಶಗಳನ್ನು ಸರಿಯಾಗಿ ಗಮನಿಸಬೇಕಾಗುತ್ತದೆ.

ಸಾಮ್ರಾಜ್ಯಶಾಹಿಗಳ ಯೋಜನೆ

ಪಾಕಿಸ್ತಾನ ಕಳೆದ ನಾಲ್ಕು ದಶಕಗಳಿಂದಲೂ ಅಮೇರಿಕಾದ ಅಚ್ಚು ಮೆಚ್ಚಿನ ಬಂಟನಾಗಿಯೇ ಇದೆ. ಅಮೇರಿಕಾ ನಡೆಸುವ ಜಾಗತಿಕ ಮಟ್ಟದ ತಂತ್ರಗಾರಿಕೆಯಲ್ಲಿ ಪಾಕಿಸ್ತಾನ ಸದಾಕಾಲ ಶಾಮಿಲು. ಇರಾನಿನ ಶಾನ ಸರ್ವಾಧಿಕಾರ ಪತನವಾದನಂತರ ಈ ಸಂಬಂಧಗಳಲ್ಲಿ ಇನ್ನೂ ಹಲವು ಗುಣಾತ್ಮಕ ವ್ಯತ್ಯಾಸಗಳು ಕಾಣಿಸಿಕೊಂಡಿರುವುದು ಸ್ಪಷ್ಟ. ಕೊಲ್ಲಿ ಪ್ರದೇಶದಲ್ಲಿ ಅಮೇರಿಕಾದ ಕಾವಲು ನಾಯಿಯಂತೆ ವರ್ತಿಸುತ್ತಿದ್ದ ಹಿಂದಿನ ಶಾ ಅಧಿಪತ್ಯದ ಪತನವಾದ ಬಳಿಕ ಕೊಲ್ಲಿ ಪ್ರದೇಶ ಮತ್ತು ದಕ್ಷಿಣ ಏಶಿಯಾದಲ್ಲಿ ತನ್ನ ವಿಧ್ವಂಸಕಾರಿ ಯೋಜನೆಗಳಿಗೆ ನೆರವಾಗುವ ನಂಬಿಗಸ್ತನಾದ ಸೇವಕನೆಂದರೆ ಪಾಕಿಸ್ತಾನ ಮಾತ್ರವೆಂದು ಅಮೇರಿಕಾ ಭಾವಿಸಿದೆ. ಪಾಕಿಸ್ತಾನದ ಬಹುಸಂಖ್ಯಾತ ಜನತೆಗೆ ಇದು ಖಂಡಿತವಾಗಿಯೂ ಒಪ್ಪಿಗೆಯಿಲ್ಲ. ಆದರೂ ಅಲ್ಲಿ ಮತ್ತೆ ಮತ್ತೆ ಅಧಿಕಾರಕ್ಕೆ ಬರುವ ಸೈನಿಕ ಸರ್ವಾಧಿಕಾರಿಗಳು ಮತ್ತು ಪಾಕಿಸ್ತಾನದ ಆಳುವ ವರ್ಗಗಳು ಅಮೇರಿಕಾದ ಈ ತಂತ್ರಕ್ಕೆ ಬಲಿಬೀಳುತ್ತಿವೆ. ಸಮಾನ ಚರಿತ್ರೆ, ಸಮಾನ ಸಂಸ್ಕೃತಿ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಪರಂಪರೆಗಳನ್ನು ಹಂಚಿಕೊಂಡಿರುವ ಭಾರತ ಮತ್ತು ಪಾಕಿಸ್ತಾನಗಳ ಆಳುವ ವರ್ಗಗಳಲ್ಲಿ ಪಾಕಿಸ್ತಾನದ ಆಳುವ ವರ್ಗ ಭಾರತದ ಆಳುವ ವರ್ಗಗಳಿಗಿಂತ ಬೇರೆಯೇ ಆದ ಆರ್ಥಿಕ ಮತ್ತು ವಿದೇಶಾಂಗ ನೀತಿಯನ್ನು ಅನುಸರಿಸುವುದಕ್ಕೆ ಮತ್ತು ಈ ರೀತಿ ಹೇಳಿಕೇಳಿ ಅಮೇರಿಕಾದ ಚೇಲವಾಗಿರುವುದಕ್ಕೆ ಏನು ಕಾರಣ ? ಮೊದಲನೆಯದಾಗಿ ಇಸ್ಲಾಂ ಧರ್ಮದ ಹೆಸರಿನಲ್ಲಿ ಪಾಕಿಸ್ತಾನದ ನಿರ್ಮಾಣವಾಗಿದ್ದರೂ ಧರ್ಮದ ನಂಟು ಪಾಕಿಸ್ತಾನದ ಜನತೆಯನ್ನು ಒಂದು ಗೂಡಿಸುವಲ್ಲಿ ಯಶಸ್ವಿಯಾಗಿಲ್ಲ. ಪಾಕಿಸ್ತಾನದ ಹೆಸರನ್ನು 'ಇಸ್ಲಾಮಿಕ್ ಗಣತಂತ್ರ' ವೆಂದು ಬದಲಾಯಿಸಿದ ಮೇಲೂ ಆ ದೇಶದ ಒಕ್ಕೂಟದಲ್ಲಿ ಸೇರಿರುವ ವಿವಿಧ ದೇಸೀ ಜನಾಂಗಗಳು ಮತ್ತು ಆಳುವ ವರ್ಗಗಳ ನಡುವೆ ತಿಕ್ಕಾಟ ಹೆಚ್ಚುತ್ತಲೇ ಇದೆ. ಆಳುವವರ್ಗಗಳು ಎಷ್ಟೇ ದಬ್ಬಾಳಿಕೆ ನಡೆಸಿದರೂ ಏನೇನೋ ಕಸರತ್ತು ನಡೆಸಿದರೂ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಬೇರೆ ರಾಷ್ಟ್ರಗಳಲ್ಲಿ ಅಲ್ಲಿನ ಆಳುವ ವರ್ಗಗಳಿಗೆ ಸಾಧ್ಯವಾಗಿರುವ ಹಾಗೆ ಪಾಕಿಸ್ತಾನದ ಮಣ್ಣಿನಲ್ಲಿ ಧಾರ್ಮಿಕ ಮೂಲಭೂತವಾದಿತನವನ್ನು ಭದ್ರವಾಗಿ ಬೆಳೆಸಲು ಪಾಕಿಸ್ತಾನದ ಆಳುವ ವರ್ಗಗಳಿಗೆ ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನದ ಜನತೆಗೂ ಅಲ್ಲಿನ ಸೈನಿಕ ಸರ್ವಾಧಿಕಾರಕ್ಕೂ ನಡುವೆ ತಿಕ್ಕಾಟ ಬೆಳೆಯುತ್ತಲೇ ಇದೆ.

ದೇಶ, ಜನ ಮತ್ತು ಆರ್ಥಿಕ ಸ್ಥಿತಿಗತಿ

ಹತ್ತು ಕೋಟಿ ಜನಸಂಖ್ಯೆಯಿರುವ ಪಾಕಿಸ್ತಾನ ನಾಲ್ಕು ಮುಖ್ಯ ದೇಸೀ ಜನಾಂಗಗಳನ್ನೊಳಗೊಂಡಿದೆ. ಪಂಜಾಬ್ ಪ್ರಾಂತದಲ್ಲಿ 5.6ಕೋಟಿ, ಸಿಂಧ್ ಪ್ರಾಂತ್ಯದಲ್ಲಿ 2.3 ಕೋಟಿ, ವಾಯುವ್ಯ ಗಡಿ ಪ್ರಾಂತ್ಯದಲ್ಲಿ 1.3ಕೋಟಿ ಜನರಿದ್ದರೆ ಅತ್ಯಂತ ವಿಶಾಲವಾದ ಬಲೂಚಿಸ್ತಾನ್ ಪ್ರದೇಶದಲ್ಲಿ ಕೇವಲ ಐವತ್ತು ಲಕ್ಷ ಜನರಿದ್ದಾರೆ. ಪಾಕಿಸ್ತಾನದ ಉತ್ಪಾದಕ ವ್ಯವಸ್ಥೆ ಮೂರನೇ ಜಗತ್ತಿನ ಇತರ ರಾಷ್ಟ್ರಗಳಂತೆಯೇ ದೇಶದ ಹೆಚ್ಚಿನ ಕೃಷಿಯೋಗ್ಯ ಭೂಮಿ ತೀರಾ ಕಡಿಮೆ ಸಂಖ್ಯೆಯ ಭೂಮಾಲಿಕರ ಕೈಯಲ್ಲಿ ಕೇಂದ್ರಿಕೃತವಾಗಿದೆ. ಯಾವುದೇ ಭೂ ಮಸೂದೆಯಿಂದಲೂ ಈ ಕೇಂದ್ರೀಕರಣವನ್ನು ನಿವಾರಿಸಲಾಗಿಲ್ಲಾ. ಗ್ರಾಮಾಂತರ ಪ್ರದೇಶದ ಅರ್ಥ ವ್ಯವಸ್ಥೆ ಮತ್ತು ರಾಜಕಾರಣ ಇವೆರಡೂ ಪ್ರಭಾವಶಾಲಿಗಳಾದ ದೊಡ್ಡ ಭೂಮಾಲಿಕರ ನಿಯಂತ್ರಣದಲ್ಲಿವೆ. ಭಾರತದಲ್ಲಾಗಿರುವಂತೆ ಅರುವತ್ತರ ಮತ್ತು ಎಪ್ಪತ್ತರ ದಶಕದಲ್ಲಿ ಕೃಷಿಯಲ್ಲಿ ಹೊಸ ತಂತ್ರಜ್ಞಾನದ ಬಳಕೆ ಮತ್ತುಯಾಂತ್ರೀಕರಣದಿಂದಾಗಿ ಬಹುಪಾಲು ಗೇಣಿ ಒಕ್ಕಲುಗಳು ಭೂಮಿ ಕಳೆದುಕೊಂಡಿದ್ದಾರೆ. ಭೂರಹಿತ ಕೃಷಿಕೂಲಿಕಾರರ ಸಂಖ್ಯೆ ಏಳು ಲಕ್ಷಕ್ಕೂ ಮಿಕ್ಕಿದೆ. ಬಲೂಚಿಗಳೂ ಪಂಜಾಬಿಗಳು, ಸಿಂಧಿಗಳು ಪಠಾಣರಲ್ಲದೆ ಉಳಿದ ಐದನೇ ಮುಖ್ಯ ದೇಸೀ ಜನಾಂಗವೆಂದರೆ ಭಾರತದಿಂದ ನಿರಾಶ್ರಿತರಾಗಿ ಬಂದ ಉರ್ದು ಭಾಷೆ ಆಡುವ ಮುಜಾಹಿರಿಗಳು. ಭಾರತಕ್ಕೆ ಓಡಿಹೋದ ಹಿಂದೂ ಮತ್ತು ಸಿಖ್ ಜನರು ಬಿಟ್ಟಿರುವ ವ್ಯಾಪಾರ ಮತ್ತು ಭೂಮಿಯ ಮೇಲೆ ಈ ಮುಜಾಹಿರಿಗಳು ನಿಯಂತ್ರಣ ಹೊಂದಿದ್ದಾರೆ.

ಸ್ವಾತಂತ್ರ್ಯ ಪೂರ್ವದಿಂದಲೂ ಪಾಕಿಸ್ತಾನದಲ್ಲಿ ಕೈಗಾರಿಕೋದ್ಯಮಗಳು ಬೆಳೆದದ್ದು ತೀರಾ ಕಡಿಮೆ. ವಿಭಜನೆಯ ಬಳಿಕ ಪಾಕಿಸ್ತಾನದ ಸರಕಾರಗಳು ವಿವಿಧ ರೀತಿಯ ನೆರವು ನೀಡಿ ಕೈಗಾರಿಕೆಗಳನ್ನು ಬೆಳೆಸಲು ಪ್ರಯತ್ನಿಸಿದರೂ ಅವು ಭೂಮಾಲೀಕ ವರ್ಗದ ಹಿತಾಸಕ್ತಿಗೆ ಧಕ್ಕೆ ತರಲು ಬಯಸಲಿಲ್ಲ. ಹಾಗಾಗಿ ಸಣ್ಣ ಪುಟ್ಟ ಕೈಗಾರಿಕೆಗಳು ಬೆಳೆದರೂ ಅವು ಕೃಷಿಯ ಮೇಲೆಯೇ ಅವಲಂಬಿತವಾದವುಗಳು. ದೇಶೀಯ ಬಂಡವಾಳದ ಕೊರತೆ ಪಾಕಿಸ್ತಾನವನ್ನು ಬಾಧಿಸುತ್ತಲೇ ಇದೆ. ಎಪ್ಪತ್ತರ ದಶಕದಲ್ಲಿ ಭುಟ್ಟೋ ಆಡಳಿತದ ವೇಳೆ ಕೆಲವೊಂದು ವಿದೇಶಿ ಉದ್ಯಮಗಳನ್ನು ರಾಷ್ಟ್ರೀಕರಿಸಿ ದೇಶೀಯ ಬಂಡವಾಳವನ್ನು ಬೆಳೆಸಿ ಕೊಳ್ಳುವ ಪ್ರಯತ್ನ ನಡೆದರೂ ಜಿಯಾ-ಉಲ್‌ಹಕ್ ಅಧಿಕಾರಕ್ಕೆ ಬಂದ ಮೇಲೆ ಈ ರಾಷ್ಟ್ರೀಕೃತ ಉದ್ಯಮಗಳನ್ನು ಮರಳಿ ಖಾಸಗೀ ಕ್ಷೇತ್ರಕ್ಕೆ ವಹಿಸಿ ಕೊಡಲಾಗಿದೆ. ಈ ಹಿನ್ನೆಲೆಯಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಬಂಡವಾಳ ಪಾಕಿಸ್ತಾನಕ್ಕೆ ಪ್ರವಾಹದಂತೆ ಹರಿದು ಬಂದುದರಲ್ಲಿ ಆಶ್ಚರ್ಯವಿಲ್ಲ. 1956-60ರ ಅವಧಿಯಲ್ಲಿ ಕೇವಲ ರೂ. 20 ಕೋಟಿಯಷ್ಟಿದ್ದ ವಿದೇಶಿ ಬಂಡವಾಳ ಎಪ್ಪತ್ತರ ದಶಕದ ಕೊನೆಗೆ ರೂ 63,089 ಕೋಟಿಯಷ್ಟಾಗಿದೆಯೆಂದರೆ ವಿದೇಶೀ ಬಂಡವಾಳದ ಪಾತ್ರ ಏನೇಂಬುದು ಅರ್ಥವಾದೀತು. ಇದಲ್ಲದೆ ಪಾಕಿಸ್ತಾನ ಕೊಲ್ಲಿ ರಾಷ್ಟ್ರಗಳಲ್ಲಿ ಸೌದಿ ಅರೇಬಿಯಾದಲ್ಲಿ ಅಮೇರಿಕಾದ ಹಿತಾಸಕ್ತಿಯ ರಕ್ಷಣೆಗಾಗಿ ತನ್ನ ಸೈನಿಕರನ್ನು ರವಾನಿಸಿದೆ. 'ಸೀಟೊ' ಮತ್ತು 'ಸೆಂಟೋ' ಒಕ್ಕೂಟದಲ್ಲೂ ಅದು ಸೇರಿಕೊಂಡಿದೆ. ಅಫಘಾನಿಸ್ತಾನದ ಕ್ರಾಂತಿವಿರುದ್ಧ ಅಮೇರಿಕಾವು ಪಾಕಿಸ್ತಾನವನ್ನು ತನ್ನ ಮುಂಚೂಣಿರಾಷ್ಟ್ರವಾಗಿ ಬಳಸಿಕೊಳ್ಳುತ್ತಿದೆ. ಪಾಕಿಸ್ತಾನದ ಈ ಎಲ್ಲಾ ಚಾಕರಿಗಳಿಗೆ ಪ್ರತಿಯಾಗಿ ಅಮೇರಿಕಾ ಸಂಯುಕ್ತಸಂಸ್ಥಾನ ಮಿಲಿಯಗಟ್ಟಲೆ ಡಾಲರುಗಳ ನೆರವನ್ನೂ ಪಾಕಿಸ್ತಾನಕ್ಕೆ ನೀಡಿದೆ. ಇದರಲ್ಲಿ ಅಪಾರ ಶಸ್ತ್ರಾಸ್ತ್ರ ನೆರವು ಸೇರಿರುವುದನ್ನು ಬೇರೆ ಹೇಳಬೇಕಾಗಿಲ್ಲ. ಅಮೇರಿಕಾದ ಸೈನಿಕ ಕಸರತ್ತುಗಳಿಗೆ ಪಾಕಿಸ್ತಾನವು ತನ್ನ ನೆಲೆಗಳನ್ನು ಬಳಸಿಕೊಳ್ಳಲು ಅವಕಾಶ ನೀಡುವುದಷ್ಟೇ ಅಲ್ಲದೆ ಇದೀಗ ಅಮೇರಿಕಾದ ವಿವಾದಾತ್ಮಕ ಸೆಂಟ್ರಲ್ ಕಮ್ಯಾಂಡ್ ಫೋರ್ಸ್ (Centcom) ಯೋಜನೆಗೂ ಅದು ಸೇರಿಕೊಳ್ಳುವುದಂತೆ.

ಒಟ್ಟನಲ್ಲಿ ಪಾಕಿಸ್ತಾನ ಅಣು ಬಾಂಬನ್ನು ಸಿದ್ಧಪಡಿಸುವ ಸ್ಥಿತಿಯಲ್ಲಿದ್ದರೂ ಅದು ಹೇಳಿ ಕೇಳಿ ಹಿಂದುಳಿದಿರುವ ರಾಷ್ಟ್ರ. ಕೃಷಿ ಪ್ರಧಾನವಾದ ಅದರ ಅರ್ಥ ವ್ಯವಸ್ಥೆ ವಿದೇಶಿ ನೆರವು ಮತ್ತು ಸಾಲಗಳ ಹೊರೆಯಲ್ಲಿ ನುಗ್ಗಾಗಿದೆ. ಸಣ್ಣ ಪುಟ್ಟ ವಸ್ತುಗಳನ್ನು ಅದು ಪಾಶ್ಚಾತ್ಯ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಆರ್ಥಿಕ ಅಭಿವೃದ್ಧಿಯಲ್ಲಿ ಪಾಕಿಸ್ತಾನದ ಸ್ಥಾನ ಜಗತ್ತಿನಲ್ಲೇ ನೂರ ಒಂದನೆಯದು, ಅತ್ಯಂತ ಬಡರಾಷ್ಟ್ರಗಳೆಂದು ಜಾಗತಿಕಬ್ಯಾಂಕ್‌ಪಟ್ಟಿಮಾಡಿರುವ34 ದೇಶಗಳಲ್ಲಿ ಪಾಕಿಸ್ತಾನವೂ ಸೇರಿದೆ. ಹೀಗಿದ್ದರೂ ಅದು ಯುದ್ಧ ಸಾಮಾಗ್ರಿ ಮತ್ತು ಶಸ್ತ್ರಾಸ್ತ್ರಗಳ ಮೇಲೆ ಮಾಡುತ್ತಿರುವ ವೆಚ್ಚ ಅದರ ಸಾಮರ್ಥ್ಯಕ್ಕೆ ಮೀರಿದ್ದು !

ದೇಶೀ ಜನಾಂಗಗಳ ಪ್ರಶ್ನೆ

ಪಾಕಿಸ್ತಾನ ತಾನು ಇಸ್ಲಾಮಿಕ್ ರಾಷ್ಟ್ರವೆಂದು ಸಾರಿಕೊಂಡು ಇಸ್ಲಾಂ ಮತದ ಹೆಸರಿನಲ್ಲಿ ಜನತೆಯನ್ನು ಒಂದಾಗಿಸಲು ಎಷ್ಟೇ ಹೆಣಗಾಡಿದರೂ ಅಲ್ಲಿನ ವಿವಿಧ ದೇಸೀ ಜನಾಂಗಗಳ ಪ್ರಬಲ ಆಶಯಗಳನ್ನು ಹತ್ತಿಕ್ಕಲು ಸಾಧ್ಯವಾಗಿಲ್ಲ. ವಿವಿಧ ದೇಸಿ ಜನಾಂಗಗಳ ನಡುವೆ ಇರುವ ಅಪಾರ ತಾರತಮ್ಯ ಮತ್ತು ಅಸಮಾನ ಬೆಳವಣಿಗೆಗಳ ವಿರುದ್ಧ ಈ ದೇಸೀ ಜನಾಂಗಗಳ ನಡುವೆ ಅಸಮಧಾನ ಹೊಗೆಯಾಡುತ್ತಿದೆ. ಈ ಅಸಮಧಾನ ಪ್ರಕಟಗೊಳ್ಳುವ ರೀತಿಯಲ್ಲಿ, ಚಾರಿತ್ರಿಕ ಕಾರಣಗಳಿಂದಾಗಿ ವ್ಯತ್ಯಾಸಗಳಿದ್ದರೂ ಬಹು ಸಂಖ್ಯಾತ ಜನರ ದುರ್ಭರ ಬಡತನ ಮತ್ತು ಪಾಕಿಸ್ತಾನವನ್ನು ಅಮೇರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳಾಗಿ ಪರಿವರ್ತಿಸಿರುವ ಆಳುವ ವರ್ಗಗಳ ನೀತಿಯ ವಿರುದ್ಧ ಪ್ರತಿಭಟನೆ ಹರಿತಗೊಳ್ಳುತ್ತಿದೆ. ಪಾಕಿಸ್ತಾನದ ಎಲ್ಲಾ ಕ್ಷೇತ್ರಗಳಲ್ಲೂ ಪಂಜಾಬಿಗಳದ್ದೇ ಪ್ರಾಬಲ್ಯ ಶೇಕಡಾ. 44ರಷ್ಟು ಪಾಕಿಸ್ತಾನಿಗಳು ಪಂಜಾಬಿಗಳಲ್ಲದಿದ್ದರೂ ಕೃಷಿ, ಕೈಗಾರಿಕೆ, ಹಣಕಾಸು, ಅಧಿಕಾರ ಮತ್ತು ಸೈನ್ಯದಲ್ಲಿ ಕೂಡಾ ಪಂಜಾಬಿನದೇ ಮೇಲುಗೈ. ಈ ಪಂಜಾಬಿ ಪ್ರಾಬಲ್ಯ ಇತ್ತೀಚೆಗೆ ಪಂಜಾಬ್ ಪ್ರಾಂತ್ಯಕ್ಕೇ ಸೀಮಿತಗೊಳ್ಳದೆ ವಾಯುವ್ಯ ಗಡಿನಾಡು ಮತ್ತು ಸಿಂಧೂ ಪ್ರಾಂತ್ಯಗಳಿಗೂ ಹಬ್ಬಲಾರಂಭಿಸಿದೆ. 'ಪಾಕಿಸ್ತಾನ ಮುಸ್ಲಿಮರ ಒಂದು ದೇಶ' ಎಂಬವಾದಕ್ಕೆ ಬೆಂಬಲ ಕೊಡುತ್ತಿರುವವರೂ ಪಂಜಾಬಿ ಭೂಮಾಲಿಕ, ಬಂಡವಾಳಶಾಹಿ ವರ್ಗಗಳೇ. ಇವರೊಂದಿಗೆ ಉರ್ದು ಮಾತಾಡುವ ಮುಜಾಹಿರಿಗಳೂ ಸೇರಿದ್ದಾರೆ. ಜಮಾತೆ ಇಸ್ಲಾಮಿನ ಮುಸ್ಲಿಂ ಮೂಲಭೂತವಾದಕ್ಕೂ ಇದರದ್ದೇ ಬೆಂಬಲ. ಹಾಗಿದ್ದರೂ ಜಿಯಾ-ಉಲ್‌ಹಕ್ ಲಷ್ಕರಿ ಶಾಸನವನ್ನು ಜಾರಿಗೆ ತಂದಾಗ ಸಿಂದ್, ಬಲೂಚಿಸ್ತಾನ್ ಮತ್ತು ವಾಯುವ್ಯ ಗಡಿ ಪ್ರಾಂತಗಳು ನಡೆಸಿದ ಹೋರಾಟದಲ್ಲಿ ಪಂಜಾಬಿನ ಮಧ್ಯಮವರ್ಗ, ವಿದ್ಯಾರ್ಥಿಗಳು ಮತ್ತು ಬುದ್ಧಿ ಜೀವಿಗಳು ಭಾಗವಹಿಸಿದರು. ಸೈನಿಕ ಆಡಳಿತೆಯಲ್ಲಿ ಇತರರಂತೆ ದಬ್ಬಾಳಿಕೆಗೊಳಗಾದ ಪಂಜಾಬಿಗಳೂ ಅಧ್ಯಕ್ಷೀಯ ಚುನಾವಣೆಯನ್ನು ಬಹಿಷ್ಕರಿಸಿದ್ದುದು ಗಮನಾರ್ಹ.

ಸ್ವಾಯತ್ತತೆಯ ಬೇಡಿಕೆ

ವಿವಿಧ ದೇಸೀ ಜನಾಂಗಗಳ ಈ ಆಶಯಗಳನ್ನು ಗಮನಿಸಿಕೊಂಡಿರುವ ಎಮ್.ಆರ್.ಡಿ. (ಮೂವ್‌ಮೆಂಟ್ ಫಾರ್ ರೆಸ್ಟೊರೇಶನ್ ಆಫ್ ಡೆಮಾಕ್ರಸಿ ಹನ್ನೊಂದು ರಾಜಕೀಯ ಪಕ್ಷಗಳ ಒಕ್ಕೂಟ) ಬೇರೆ ಬೇರೆ ಪ್ರಾಂತಗಳಿಗೆ ಸಂಪೂರ್ಣ ಸ್ವಾಯತ್ತೆ ನೀಡುವುದನ್ನು ಒಂದು ಮುಖ್ಯ ಬೇಡಿಕೆಯಾಗಿ ಅಂಗೀಕರಿಸಿದೆ. ವಿವಿಧ ದೇಸೀ ಜನಾಂಗ ಮತ್ತು ಪ್ರಾಂತ್ಯಗಳ ನಡುವಿನ ಅಸಮಾನತೆಗೆ ಮೂಲಾಧಾರವಾದ ಪಾಳೆಯಗಾರಿ ಶಕ್ತಿಗಳ ಕಪಿಮುಷ್ಟಿಯ ವಿರುದ್ಧ ವಿರೋಧ ಪಕ್ಷಗಳು ಸ್ಪಷ್ಟವಾದ ಯಾವುದೇ ಮಾತನ್ನು ಹೇಳದಿದ್ದರೂ ಎಲ್ಲ ಪ್ರಾಂತ್ಯಗಳಿಗೂ ಸಮಾನ ಹಕ್ಕಿರಬೇಕೆಂಬ ಬೇಡಿಕೆಯನ್ನು ಎತ್ತಿ ಹಿಡಿದಿವೆ. ಬೇರೆ ಬೇರೆ ಪ್ರದೇಶಗಳ ದೇಸೀ ಜನಾಂಗಗಳ ಆಶಯವನ್ನು ಗುರುತಿಸಿಕೊಳ್ಳುವ ಮೂಲಕ ಮಾತ್ರವೇ ಪಾಕಿಸ್ತಾನ ಛಿದ್ರ ಛಿದ್ರವಾಗುವುದನ್ನು ತಡೆಯುವುದು ಸಾಧ್ಯವೆನ್ನುವುದು ಈ ಪಕ್ಷಗಳಿಗೆ ಅರ್ಥವಾಗಿದೆ. ಇವೆಲ್ಲವನ್ನು ಅಫಘಾನ್ ಕ್ರಾಂತಿಗೆ ಸಂಬಂಧಿಸಿದಂತೆ ವಿವಿಧ ವಿರೋಧ ಪಕ್ಷಗಳು ಸಹಾನುಭೂತಿ ವ್ಯಕ್ತಪಡಿಸಲಾರಂಭಿಸಿವೆ. ವಾಯುವ್ಯ ಪ್ರಾಂತ್ಯದ ಪಠಾಣರಂತೂ ಅಫಘಾನಿಸ್ತಾನದ ಕ್ರಾಂತಿಯನ್ನು ಆಸೆಯ ಕಣ್ಣುಗಳಿಂದ ನೋಡಲಾರಂಭಿಸಿದ್ದಾರೆ. ಅಫಘಾನಿಸ್ತಾನದ ಪಿ.ಡಿ.ಪಿ.ಎ. ಪ್ರಧಾನ ಕಾರ್ಯದರ್ಶಿ ನಜೀಬುಲ್ಲಾ ಅವರು ಘೋಷಿಸಿರುವ ರಾಷ್ಟ್ರೀಯ ಮರು ಹೊಂದಾಣಿಕೆಯ ನೀತಿ ಪಾಕಿಸ್ತಾನದಲ್ಲಿ ವ್ಯಾಪಕವಾಗಿ ಸ್ವಾಗತಿಸಲ್ಪಡುತ್ತಿದೆ. ಸಾರ್ವಜನಿಕ ಅಭಿಪ್ರಾಯ ಅಫಘಾನಿಸ್ತಾನದೊಂದಿಗೆ ರಾಜೀ ಒಪ್ಪಂದಕ್ಕೆಅನುಕೂಲವಾಗಿ ಬೆಳೆಯುತ್ತಿರುವುದನ್ನು ಕಾಣಬಹುದು.

ರಾಜಕೀಯ ಪರಿಸ್ಥಿತಿ

ಪಾಕಿಸ್ತಾನದ ಜನತೆ ದಶಕಗಳ ಕಾಲ ಉಸಿರುಕಟ್ಟಿಸುವ ವಾತಾವರಣದಲ್ಲೇ ಬದುಕಿದವರು. ಅವರ ಆಸೆ ಆಕಾಂಕ್ಷೆಗಳನ್ನು ಹತ್ತಿಕ್ಕಿ ತುಳಿಯಲಾಗಿದೆ. ಅಮೇರಿಕಾ ಸಾಮ್ರಾಜ್ಯಶಾಹಿ

[6ನೇ ಪುಟ ನೋಡಿ]

ಕೃಷಿಯಲ್ಲಿ ಬಂಡವಾಳಶಾಹಿ ಪ್ರವೇಶ ಮತ್ತು ಸೆಪ್ಟೆಂಬರ್ ಚಳುವಳಿ

ಸೆಪ್ಟೆಂಬರ್ 7 ರಿಂದ 13ರ ವರೆಗಿನ ಅಖಿಲ ಭಾರತ ರೈತ ಚಳುವಳಿ ರೈತರ ಸಮಸ್ಯೆಗಳು ತಳೆದಿರುವ ಅಖಿಲ ಭಾರತ ಸ್ವರೂಪ ಎತ್ತಿ ತೋರಿಸುತ್ತಿದೆ. ಕೃಷಿಯಲ್ಲಿಯೂ ಪ್ರವೇಶಿಸಿರುವ ಬಂಡವಾಳಶಾಹಿ ಪಥದಲ್ಲಿ ಕೃಷಿ ಕೂಲಿಗಾರರ, ಸಣ್ಣರೈತರ, ಒಟ್ಟನಲ್ಲಿ ಎಲ್ಲಾ ರೈತರ ಜೀವನ ನಜ್ಜುಗುಜ್ಜಾಗುತ್ತಿದೆ. ಅವರ ಬದುಕು ಬಂಡವಾಳಶಾಹಿ ದಾರಿಯಲ್ಲಿ ಬಿದ್ದ ಅನಾಥ ಹೆಣದಂತಾಗಿದೆ.

"ಭೂಮಿ, ಬೆಲೆ, ಕೂಲಿ, ಕರಭಾರ ಸಾಲಗಳ ನಿವಾರಣೆ ನೀರಾವರಿ, ಬರಗಾಲ, ಕೂಲಿಗಾಗಿ ಕಾಳು" ಇವು ಇಂದು ಭಾರತಾದ್ಯಂತ ರೈತರು ಮೊಳಗಿಸುತ್ತಿರುವ ಘೋಷಣೆಗಳು. ಇವೆಲ್ಲ ಘೋಷಣೆಗಳು ಪಾಳೆಯಗಾರಿ ಸಂಬಂಧಗಳನ್ನು ನಾಶಗೊಳಿಸದೆ, ಕೃಷಿಯನ್ನು ಇಡೀ ದೇಶದ ಆರ್ಥಿಕವನ್ನು ಶತಮಾನಗಳ ಹಿಂದಿನ ಸಂಕೋಲೆಯಿಂದ ಬಿಡುಗಡೆ ಮಾಡದೆ ಬಂಡವಾಳಶಾಹಿ ದಾರಿಯನ್ನು ಹಿಡಿಯುತ್ತಿರುವುದರ ಫಲ. ಪ್ರಪಂಚವೆಲ್ಲೆಡೆ ಬಂಡವಾಳಶಾಹಿಯು, ಆಧಾರಗಳು ಕುಸಿದು ಬೀಳುತ್ತಿರುವ ಘಟ್ಟದಲ್ಲಿ ಸಾಮ್ರಾಜ್ಯಶಾಹಿಯಾಗಿ ಬೆಳೆದು ಅವಸಾನದ ಅಂಚಿನಲ್ಲಿರುವ ಬಂಡವಾಳಶಾಹಿ, ತಾನು ಸಾಯುವುದು ಖಂಡಿತವೆಂದು ತಿಳಿದ, ರಕ್ತದ ಕಣಕಣವೂ ವಿಷವಾಗಿರುವ ರಕ್ಕಸನೊಬ್ಬ ಈ ವಿಷಯವನ್ನು ಇಡೀ ಜಗತ್ತಿಗೇ ಉಣಿಸಿ ಸಾಯಬೇಕೆಂದು, ಇಡೀ ಜಗತ್ತಿನ ಎಲ್ಲಾ ಜೀವ ಜೀವಾಳವನ್ನು ತನ್ನೊಂದಿಗೇ ಎಳೆದೊಯ್ಯ ಬೇಕೆಂದು ತೀರ್ಮಾನಿಸಿ, ಅಣು ಬಾಂಬ್, ಅಂತರಿಕ್ಷ ಯುದ್ಧಗಳ ಭಯಂಕರ ಕನಸು ಕಾಣುತ್ತಿರುವ ಈ ಕಾಲ ಘಟ್ಟದಲ್ಲಿ ಭಾರತ ಬಂಡವಾಳಶಾಹಿ ಪಥವನ್ನು ಹಿಡಿದಿರುವುದರ ಫಲ ಇದು. ಇಡೀ ಜಗತ್ತಿನ ಬಂಡವಾಳಶಾಹಿ ಮಾರುಕಟ್ಟೆಯಲ್ಲಿ ತನ್ನನ್ನೇ ಬಿಕರಿಗೊಡ್ಡಿಕೊಂಡಿರುವುದರ ಫಲ ಇದು.

ಅಂತರರಾಷ್ಟ್ರೀಯ ಮಾರುಕಟ್ಟೆಯ ಭಾಗ

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾಮ್ರಾಜ್ಯಶಾಹಿ ದೇಶಗಳ ಯಂತ್ರೋಪಕರಣ ತಂತ್ರ ಜ್ಞಾನಗಳ ಬೆಲೆ ಗಗನಕ್ಕೇರುತ್ತಾ, ಭಾರತದಂತಹ ಹಿಂದುಳಿದ ರಾಷ್ಟ್ರಗಳು ಬೆಳೆಯುವ ಕೃಷಿ ಫಸಲಿನ (ಕಾಫಿ, ಸಕ್ಕರೆ, ಚರ್ಮ ಇತ್ಯಾದಿಗಳು) ಬೆಲೆ ಕುಸಿಯುತ್ತಿರುವುದರ ಫಲ ಇದು. ಮೂರನೇ ಜಗತ್ತಿನ ಎಲ್ಲಾದೇಶಗಳ ಮೇಲೆ ಇಂದು ಒಂದು ಸಾವಿರ ಸಾವಿರ ಕೋಟಿ ಡಾಲರುಗಳಷ್ಟು ಅಂದರೆ 14 ಸಾವಿರಸಾವಿರ ಕೋಟಿ ರೂ. ಗಳಷ್ಟು ಸಾಲ ಹೇರಿಕೊಂಡಿರುವುದರ ಫಲ. ಭಾರತದ ಮೇಲೆ 28,000 ಕೋಟಿರೂ. ಗಳಿಗಿಂತ ಹೆಚ್ಚಾಗಿ ವಿದೇಶಿ ಸಾಲ ಹೇರಿಕೊಂಡಿರುವುದರಫಲ. ಈ ಸಾಲ ತೀರುವಳಿಗಾಗಿ, ತನ್ನ ಮನೆಯಲ್ಲಿ ಉಣ್ಣುವುದಕ್ಕೆ ಇರಲಿ ಇಲ್ಲದಿರಲಿ ಬಂದ ಬೆಳೆಯನ್ನೆಲ್ಲಾ ಮಾರುವ, ಅದೂ ಅತ್ಯಂತ ಅಗ್ಗದ ಬೆಲೆಗೆ ತಾನು ಸಾಲ ಪಡೆದಿರುವ ದಲಾಲನಿಗೆ ಮಂಡಿ ಸಾಹುಕಾರನಿಗೆ ಮಾರುವ ಬಡ ರೈತನಂತೆ ನಮ್ಮ ದೇಶದ ಸಂಪತ್ತನ್ನು ಸಾಮ್ರಾಜ್ಯಶಾಹಿ ದೇಶಗಳ ದೋಚುವಿಕೆಗೆ ಒಡ್ಡುತ್ತಿರುವುದರ ಫಲ ಇದು.

ಭಾರತದೇ ಒಂದು ಮಾರುಕಟ್ಟೆ

ಇಂದು ಭಾರತ ವಿಶ್ವ ಮಾರುಕಟ್ಟೆಯ ಒಂದು ಭಾಗವಾಗಿ ವಿಶ್ವದ ಎಲ್ಲಾ ಏರಿಳಿತಗಳು ನಮ್ಮ ಬದುಕಿನ ಮೇಲೆ ಪರಿಣಾಮ ಬೀರುವಂತೆ, ಇಡೀ ಭಾರತವೇ ಒಂದು ದೊಡ್ಡ ಮಾರುಕಟ್ಟೆಯಾಗಿದೆ. ಹಿಂದಿನ ದಿನಗಳಲ್ಲಿನ ಪ್ರತಿಯೊಂದು ಹಳ್ಳಿಯೂ ಒಂದು ಸ್ವಯಂಪೂರ್ಣ ವ್ಯವಸ್ಥೆಯಾಗಿ ಅಲ್ಲಿ ಉತ್ಪಾದನೆ ಮಾಡಿದುದರಲ್ಲಿ ಬಹು ಭಾಗವನ್ನು ಅಲ್ಲಿಯೇ ತಿನ್ನುವುದರ ಬದಲಾಗಿ ಮಾರುಕಟ್ಟೆಗೆ ಬರುವ ವ್ಯವಸ್ಥೆ ಇಂದು ಸ್ಥಾಪಿಸಲಾಗಿದೆ. ಇದರಿಂದ ಅತ್ಯಂತ ಹಿಂದುಳಿದ ಕಗ್ಗಾಡು ಪ್ರದೇಶವೂ ಇಡೀ ದೇಶದ ಮಾರುಕಟ್ಟೆಗೆ ಜೋಡಣೆಯಾಗಿದೆ. ರೊಕ್ಕದಬೆಳೆಗಳು ಮಾತ್ರ ವಲ್ಲ ತೊಗರಿ, ಭತ್ತಗಳೂ ಮಾರುಕಟ್ಟೆಗಾಗಿ ಬೆಳೆಯಲಾಗುತ್ತಿದೆ. ಇದರ ಫಲವೇ ಗುತ್ತೇದಾರಿ ಬಂಡವಾಶಾಹಿಗಳ ಪ್ರಯೋಜನಕ್ಕಾಗಿ ಸೂಪರ್ ಪ್ರಾಫಿಟ್ ಎಂದು ಮಾರ್ಕ್ಸ್‌ರವರು ಕರೆದ ಅತಿಲಾಭಕ್ಕಾಗಿ ಕೈಗಾರಿಕೋತ್ಪಾದನೆಗಳ ಬೆಲೆಯನ್ನು ಏರಿಸಲು ಎಲ್ಲ ಅವಕಾಶ ನೀಡುತ್ತಿರುವುದು, ಅಷ್ಟೇ ಅಲ್ಲ ವಿದೇಶಿ ಕಂಪನಿಗಳಾದ, ರೈತರಿಗೆ ಚಿರಪರಿಚಿತವಾದ ಬೇಯರ್ಸ್, ಸೀಬಾಗೈಗಿ, ಹೆಕ್ಸ್ಟ್, ಫೈಜರ್‌ಗ ಕೀಟನಾಶಕಗಳ ಮೂಲಕ ಗಟಾರ್ ಸ್ಪ್ರೇಯರ್ಸ್, ಮ್ಯಾಸ್ಸಿ ಫರ್ಗುಸನ್ ಟ್ರ್ಯಾಕ್ಟರ್‌ಗಳ ಮೂಲಕ ಪಶ್ಚಿಮ ಜರ್ಮನಿ, ಅಮೇರಿಕ ಮೊದಲಾದ ದೇಶಗಳ ಬಹುರಾಷ್ಟ್ರೀಯ ಗುತ್ತೆದಾರಿಗಳಿಗೆ ನಮ್ಮ ರೈತರ ಬೆವರು ಕೂಲಿಕಾರರ ರಕ್ತ ಆಹಾರವಾಗುತ್ತಿರುವುದು. ಅವರಿಗೆ ಒಂದಕ್ಕೆ ನಾಲ್ಕು ಲಾಭಗಳಿಸಲು ನಮ್ಮ ದೇಶದ ಸರಕಾರ ಅವಕಾಶ ಮಾಡಿಕೊಟ್ಟಿರುವುದು. ಇದು ಒಂದು ಕಡೆಗಾದರೆ ಮತ್ತೊಂದು ಕಡೆ ನಮ್ಮ ದೇಶದ ಬಂಡವಾಳಶಾಹಿಗಳಿಗೆ, ಪರ ದೇಶದ ಗುತ್ತೆದಾರಿಗಳಿಗೆ ಅನುಕೂಲವಾಗಲೆಂದೇ ಕೃಷಿಯ ಉತ್ಪನ್ನಗಳಾದ ಕಚ್ಚಾ ಮೂಲಗಳ ಬೆಲೆ ಕುಸಿಯುವಂತೆ ಮಾಡಲು ಕುಸಿದಾಗ ಹೇರಳವಾಗಿ ಕೊಂಡು ದಾಸ್ತಾನು ಮಾಡಿ ಲಾಭಗಳಿಸಲು ಮುಕ್ತ ಅವಕಾಶ. ಆಹಾರ ಧಾನ್ಯಗಳಿಗೆ ಲಾಭದಾಯಕ ಬೆಲೆ ನೀಡಿದರೆ ಕೈಗಾರಿಕೆಗಳಲ್ಲಿ ವೇತನ ಹೆಚ್ಚಿಸಬೇಕಾಗುತ್ತದೆಂಬ ಕಾರಣಕ್ಕಾಗಿ ಆಹಾರ ಧಾನ್ಯಗಳಿಗೆ ಕಡಿಮೆ ಬೆಲೆ ನೀಡುವುದು ಮಾತ್ರವಲ್ಲ, "ಲೇವಿ" ರೂಪದಲ್ಲಿ ಅತ್ಯಂತ ಅಗ್ಗದ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಸಾಮಾನ್ಯ ರೈತರಿಂದಲೂ ಜುಲುಮೆ ಮಾಡಿ ವಸೂಲು ಮಾಡುವುದು. ಹೀಗೆ ಕೈಗಾರಿಕೋತ್ಪಾದನೆಯ ವಸ್ತುಗಳ ಬೆಲೆ ಏರಿಸುವುದು ಕೃಷಿ ಉತ್ಪಾದನೆಯ ಬೆಲೆಗಳನ್ನು ಕೆಳಕ್ಕೆ ತುಳಿದು ಬಿಡುವುದರಿಂದ ರೈತರ ದುಡಿಮೆಯ ಫಲ ಬಂಡವಾಳಶಾಹಿ ಬೊಕ್ಕಸಗಳಿಗೆ ಹರಿಯುತ್ತದೆ.

ಭೂಮಾಲಕರಿಗೆ ರಕ್ಷಣೆ

ಭೂಮಾಲಕರು ಉತ್ಪಾದನೆಗಳನ್ನು ಕಾಯ್ದಿಟ್ಟು ಬೆಲೆ ಏರಿದ ಮೇಲೆ ಮಾರುಕಟ್ಟೆಗೆ ಬಿಡಲು ಬೇಕಾದ ಆರ್ಥಿಕ ರಕ್ಷಣೆ ಇನ್ನೂ ಉಳಿದಿರುವ ಜೀತ ಪದ್ಧತಿ, ಕಡಿಮೆ ಕೂಲಿ ನೀಡಿಕೆ ಸರಕಾರದ ಕಾನೂನು, ಲೆವಿ, ತೆರಿಗೆಗಳಿಂದ ರಕ್ಷಿಸಿಕೊಳ್ಳಲು ಇಡೀ ಸರಕಾರೀ ಯಂತ್ರವೇ ಅವರಿಗೆ ತಲೆ ಬಾಗುವುದು ಮಾತ್ರವಲ್ಲ ಕೃಷಿ ಉತ್ಪಾದನೆಗಳ ಬೆಲೆ ಕುಸಿದಾಗ ಭೂಮಾಲಕರು ತಮ್ಮ ಸಂಘಗಳ ಪ್ರತಿನಿಧಿಗಳ ಮೂಲಕ ಒತ್ತಡ ಹೇರಿ ಕಚ್ಚಾ ಹತ್ತಿ, ಸಕ್ಕರೆ ಇತ್ಯಾದಿ ವಸ್ತುಗಳು ತಮಗೆ ಲಾಭವಾಗುವಷ್ಟರ ಮಟ್ಟಿಗಾದರೂ ರಫ್ತಾಗುವಂತೆ ನೋಡಿಕೊಳ್ಳುವ ಮೂಲಕ ತಮ್ಮ ಲಾಭವನ್ನು ರಕ್ಷಿಸಿಕೊಳ್ಳಲು ಅವಕಾಶವಾಗಿದೆ. ಕೆಲವೊಮ್ಮೆ ಅವರು ಪ್ರತಿಭಟಿಸಿ ತಿರುಗಿ ಬಿದ್ದು ತಮ್ಮ ಬೇಡಿಕೆಗಳನ್ನು ಸಾಧಿಸಿಕೊಂಡಿದ್ದಾರೆ.

ಕರಭಾರ

ಆದರೆ ರೈತರ ದುಡಿಮೆಯ ಫಲಬಂಡವಾಳಶಾಹಿ ಬೊಕ್ಕಸಗಳಿಗೆ ಹರಿಯುವುದಕ್ಕೆ ಇದೊಂದೇ ದಾರಿಯಲ್ಲ. ಹಿರಿಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ ಭೂಮಾಲಕ ವರ್ಗದ ಸರಕಾರ ಬಂಡವಾಳಶಾಹಿ ಭೂಮಾಲಕ ವರ್ಗಗಳಿಗೆ ಅನುಕೂಲ ಕಲ್ಪಿಸಿಕೊಡಲು, ಅವರಿಗೆ ಅಗ್ಗವಾದ ವಿದ್ಯುತ್, ತೈಲು ಸಾಗಾಣೆ ಅಗ್ಗದ ದರದಲ್ಲಿ ಉಕ್ಕು ಮೊದಲಾದ ಮೂಲ ಭೂತ ಸಾಮಗ್ರಿಗಳನ್ನು ಒದಗಿಸುವುದಕ್ಕಾಗಿ, ಬಂಡವಾಳಶಾಹಿವರ್ಗ ಪರದೇಶಗಳಿಗೆ ವಸ್ತುಗಳನ್ನು ರಫ್ತು ಮಾಡಿ ಹಣಗಳಿಸಲವಕಾಶ ವಾಗುವಂತೆ ರಫ್ತು ಸಬ್ಸಿಡಿಅಥವಾ ಸಹಾಯ ಧನ ನೀಡಲು, ಅವರು ಹೊಸ ಹೊಸ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳಲು ತಮ್ಮ ಕೈಗಾರಿಕೆಗಳ ಯಂತ್ರಗಳನ್ನು ಆಧುನಿಕರಿಸಲು ನೀಡಬೇಕಾದ ಸಹಾಯಗಳಿಗಾಗಿ ಎಲ್ಲಾ ಜನರ ಮೇಲೆ ಹೊರುವಂತೆ ರೈತರ ಮೇಲೂ ಕರಭಾರ ಹೇರುತ್ತದೆ. ನೀರಾವರಿ ಅನುಕೂಲದಿಂದ ಅತ್ಯಂತ ಹೆಚ್ಚು ಲಾಭ ಪಡೆದ ಅತೀ ಹೆಚ್ಚು ಭೂಮಿ ಪಡೆದಿರುವ ಭೂಮಾಲಕರ ಮೇಲೆ ಆದಾಯ ತೆರಿಗೆಯಂತಹ ನೇರ ತೆರಿಗೆಯ ರೂಪದಲ್ಲಿ ಹಾಕದೆ ಎಲ್ಲಾ ರೈತರ ಮೇಲೂ ನೀರು ದರ, ಬೆಟರ್‌ಮೆಂಟ್ ಲೆವಿ ಹೆಸರಿನಲ್ಲಿ ಹಾಕುವುದರಿಂದ ರೈತರು ಸುಲಿಗೆಗೊಳಗಾಗಿದ್ದಾರೆ. ಹೀಗೆ ರೈತರ ದುಡಿಮೆಯ ಒಂದು ದೊಡ್ಡ ಭಾಗ ಕೃಷಿ ವ್ಯವಹಾರ, ಭೂಮಿ ನೀರುಗಳ ಮೇಲೆ ಹಾಕುವ ತೆರಿಗೆಯ ಮೂಲಕ ಹಾಗೆಯೇ ರೈತರು ಕೊಳ್ಳುವ ಎಲ್ಲಾ ವಸ್ತುಗಳ ಮೇಲೆ ಹಾಕಿರುವ ತೆರಿಗೆಯ ಮೂಲಕ ಬಂಡವಾಳಶಾಹಿ ಭೂಮಾಲಕ ವರ್ಗಗಳ ಸರಕಾರದ ಕೈಗೆ ಹೋಗುತ್ತಿದೆ. ಅಂದರೆ ಸುತ್ತು ಬಳಸು ದಾರಿಯಲ್ಲಿ ಬಂಡವಾಳಶಾಹಿ ಭೂಮಾಲಕ ವರ್ಗಗಳ ಜೇಬಿಗೇ ಹೋಗುತ್ತದೆ.

ಭೂಮಿ

ಹೀಗೆ ಅನೇಕ ಮಾರ್ಗಗಳ ಮೂಲಕ ಬಂಡವಾಳಶಾಹಿ ಭೂ ಮಾಲಕರ ಕಿಸೆ ರೈತರ ದುಡಿಮೆಯ ಫಲದಿಂದ ತುಂಬಿದರೆ ರೈತರು ಹಗಲಿರುಳು ದುಡಿದರೂ ದಿವಾಳಿಯಾಗುವುದರಲ್ಲಿ ಆಶ್ಚರ್ಯವೇನು? ಹೀಗೆ ಕಿಸೆಬರಿದಾದ ರೈತರನ್ನು ಸಂಸಾರವನ್ನು, ತನ್ನ ಕೃಷಿಯ ವೆಚ್ಚವನ್ನು ಸಾಗಿಸುವುದಕ್ಕಾಗಿ ಸಾಲದ ಶೂಲಕ್ಕೆ ಒಳಗಾಗುವುದು ಅನಿವಾರ್ಯವಾಗುತ್ತದೆ. ಸಹಕಾರಿ ಸಂಸ್ಥೆಗಳಲ್ಲಿ ಸಾಲ ಪಡೆದು ಅದನ್ನು ತೀರಿಸುವುದು ಅಸಾಧ್ಯವಾದ ಮೇಲೆ ಬಡ್ಡಿ ಸಾಹುಕಾರರ ಭೂಮಾಲೀಕ ಲೇವಾದೇವಿಗಾರರ ಕೈಗೆ ಸಿಕ್ಕಿಬೀಳುತ್ತಾನೆ. ಕೊನೆ ಕೊನೆಗೆ ತನ್ನ ಜಮೀನು ಒತ್ತೆ ಹಾಕುವುದು ಅಥವಾ ಒಂದೊಂದೇ ತುಂಡಾಗಿ ಮಾರುವುದು ಅನಿವಾರ್ಯವಾಗುತ್ತದೆ. ಈ ಭೂಮಿ ಯಾರ ಕೈಗೆ ಹೋಗುತ್ತದೆ?

ಭೂಮಿಯ ಮೇಲೆ ಪಾಳೆಯಗಾರಿ ಕಾಲದ ಫಲವಾದ ಭೂಮಾಲಕರ ಹಿಡಿತ ಮತ್ತಷ್ಟು ಬಲವಾಗುತ್ತದೆ. ಹಣ ವಿರುವ ಬಡ್ಡಿ ಸಾಹುಕಾರ ಭೂಮಾಲಕ ಲೇವಾದೇವಿಗಾರ, ಪೇಟೆಯ ಬಂಡವಾಳಶಾಹಿ ವಾಣಿಜ್ಯಗಾರರ, ಕೈ ಸೇರುತ್ತದೆ. ಭೂಮಿ ಕಳೆದುಕೊಂಡ ಪ್ರದೇಶದಲ್ಲಿ ಸರಕಾರಿ ಭೂಮಿ ಉಳಿದಿದ್ದರೆ ಆ ಬಂಜರು ಭೂಮಿಯನ್ನು ಗುಡ್ಡ, ಕಾಡು ಮೇಡುಗಳನ್ನು ಉಳಲು ಈ ಭೂಹೀನರ ಪ್ರಯತ್ನ ಅದನ್ನು ತನ್ನ ಕೈ ವಶಮಾಡಿಕೊಳ್ಳ ಬಯಸುವ ಭೂಮಾಲಿಕರ ಕುತಂತ್ರ, ಅವರಿಗೆ ಅನುಕೂಲವಾಗುವ ಸರಕಾರ, ಯಂತ್ರ ಇವುಗಳ ನಡುವೆ ದೊಡ್ಡ ಹೋರಾಟವೇ ಸಾಗುತ್ತದೆ. ಹೀಗೆ ಭೂಮಿಯ ಕೇಂದ್ರೀಕರಣ ಹೆಚ್ಚುತ್ತಾ, ಭೂಮಿಯ ಸಂಬಂಧ ಪೂರ್ತಿ ಕಳೆದುಕೊಂಡ ಕೃಷಿ ಕಾರ್ಮಿಕರು ಇನ್ನೂ ಅಷ್ಟಿಷ್ಟು ಉಳಿಸಿಕೊಂಡು ಕೂಲಿಗಾರರಾಗಿ ದುಡಿಯುವ ಸಣ್ಣ ರೈತರ ಸಂಖ್ಯೆ ಬೃಹದಾಕಾರವಾಗಿ ಬೆಳೆಯುತ್ತದೆ. ಅಗ್ಗವಾಗಿ ದೊರಕುವ ಇವರ ಶ್ರಮದ ಫಲ ಬಂಡವಾಳಶಾಹಿ ಭೂಮಾಲಕನಿಗೆ ಸಿಗುತ್ತದೆ.

ಭೂಮಿಯ ಕೇಂದ್ರೀಕರಣದಲ್ಲಿ ಕೊನೆಗೊಳ್ಳುವ, ದೊಡ್ಡ ಪ್ರಮಾಣದ ಬಂಡವಾಳಶಾಹಿ ಬೇಸಾಯದ ಎಸ್ಟೇಟುಗಳು ಫಾರ್ಮ್‌ಗಳಿಗೆ ದಾರಿಯಾಗುವ, ಮತ್ತು ಹಾಗೆ ಬಂಡವಾಳಶಾಹಿ ದಾರಿಯನ್ನು ತುಳಿಯುವ ಹಾದಿಯಲ್ಲಿ ಲಕ್ಷಾಂತರ ರೈತರನ್ನು ಭೂಹೀನರನ್ನಾಗಿ ನಿರ್ಗತಿಕರನ್ನಾಗಿ ಮಾಡುವ ಈ ಬಂಡವಾಳಶಾಹಿ ಪಥದ ಮೇಲೆ ಇಂದು ನಮ್ಮ ಹೋರಾಟ. ಜೀವನವನ್ನು ಬದುಕನ್ನು ಉಳಿಸಿಕೊಳ್ಳಲು ರೈತರು, ಕೃಷಿಕೂಲಿಕಾರರು ಮಾಡುವ ಯಾವುದೇ ಹೋರಾಟ ಈ ಬಂಡವಾಳಶಾಹಿ ಭೂಮಾಲಕ ವ್ಯವಸ್ಥೆಯ ವಿರುದ್ಧದ ಹೋರಾಟವಾಗುತ್ತದೆ ಮತ್ತು ಆಗಬೇಕು. ಸೆಪ್ಟೆಂಬರ್ ಚಳುವಳಿಯಲ್ಲಿ ಇಡೀ ಭಾರತದ ರೈತರು ಎತ್ತುವ ಭೂಮಿ, ಬೆಲೆ, ಕೂಲಿ, ಸಾಲ ಕರಭಾರದ ಘೋಷಣೆಯ ಉದ್ದೇಶ ಮತ್ತು ಮೂಲ ಇಲ್ಲಿದೆ. ಕೃಷಿಯಲ್ಲಿ ಪ್ರವೇಶವಾಗುತ್ತಿರುವ ಬಂಡವಾಳಶಾಹಿಯ ದುಷ್ಪರಿಣಾಮಗಳಲ್ಲಿದೆ.

ಪಾಳೆಯಗಾರಿ ಸಂಬಂಧಗಳನ್ನು ಉಳಿಸಿಕೊಂಡೇ ಕೃಷಿಯಲ್ಲಿ ಬಂಡವಾಳಶಾಹಿ ಪಥವನ್ನು ಹಿಡಿದಿರುವುದರಿಂದಲೇ ರೈತರಎಲ್ಲಾ ಸಂಕಷ್ಟಗಳಿಗೆ ಕಾರಣವಾಗಿದೆ. ಆದುದರಿಂದ ಅಪಾಯಕಾರಿ ಬಂಡವಾಳಶಾಹಿ ಪಥದ ವಿರುದ್ಧ ಹೋರಾಡುವುದೇ ಸೆಪ್ಟೆಂಬರ್ ಚಳುವಳಿಯ ಗುರಿ ಎಂಬುದನ್ನು ವಿವರಿಸಿದ್ದಾರೆ –ಕಾ||ನಾಗರಾಜ್

ಸಿರುಗುಪ್ಪ : ಡಿ. ವೈ. ಎಫ್. ಐ. ಬಹಿರಂಗ ಸಭೆ

ಬಳ್ಳಾರಿ ಜಿಲ್ಲೆಯ ಸಿರುಗುಪ್ಪದಲ್ಲಿ ಡಿ. ವೈ. ಎಫ್. ಐ. ನ ಆಶ್ರಯದಲ್ಲಿ ಜುಲೈ 12 ರಂದು ಬಹಿರಂಗ ಸಭೆ ನಡೆಯಿತು. ಡಿ. ವೈ. ಎಫ್. ಐ. ನ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಕಾ.ಜಂಬಯ್ಯನಾಯಕ ಅವರುಮಾತನಾಡುತ್ತಾ ದೇಶದ ಸ್ವಾತಂತ್ರ್ಯ ಮತ್ತು ಸಮಗ್ರತೆಯನ್ನು ಕಾಪಾಡುವಲ್ಲಿ ವಿಫಲವಾಗಿರುವ ಕೇಂದ್ರ ಸರ್ಕಾರ, ಭ್ರಷ್ಟಾಚಾರ, ಕೋಮುವಾದ ಮತ್ತು ಛಿದ್ರಕಾರೀ ಶಕ್ತಿಗಳ ಬೆಳವಣಿಗೆಗೆ ದಾರಿ ಮಾಡಿ ಕೊಟ್ಟಿರುವುದರಿಂದ ಇದರ ವಿರುದ್ಧ ಹೋರಾಡಲು ಎಡ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಯುವಜನರು ಸೇರಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಸಭೆಯನ್ನುದ್ದೇಶಿಸಿ ಕಾ||ಸುರೇಶ್ ಕುಷ್ಟಗಿ, ಕಾ|| ಕೆಂಚಪ್ಪ, ಕಾ||ಬಿಂದುಮಾಧವ ಮುಂತಾದವರು ಮಾತನಾಡಿ ಬಳ್ಳಾರಿ ಜಿಲ್ಲೆಯಲ್ಲಿ ಡಿ. ವೈ. ಎಫ್. ಐ. ನಡೆಸುತ್ತಿರುವ ಹೋರಾಟ, ಕೋಟಿ ಪ್ರದೇಶಗಳ ಸಮಸ್ಯೆಗಳ ಪರಿಹಾರಕ್ಕಾಗಿ ಮುಂದುವರಿಯುತ್ತಿರುವ ಹೋರಾಟಗಳ ಬಗ್ಗೆ ವಿವರಿಸಿದರು. ಸಭೆಗೆ ಮೊದಲು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಬಿ. ಇ. ಎಫ್. ಐ. ಕರೆ

ಸೆಪ್ಟೆಂಬರ್ 2, ಬ್ಯಾಂಕ್ ನೌಕರರ ಮುಷ್ಕರ

ಬ್ಯಾಂಕ್ ಎಂಪ್ಲಾಯಿಸ್ ಫೆಡರೇಷನ್ ಆಫ್ ಇಂಡಿಯಾ ಜೂನ್ 30 ರಂದು ಐ.ಬಿ.ಎ. ಮತ್ತು ಕೇಂದ್ರ ಸರ್ಕಾರದ ಮುಂದಿಟ್ಟ ಬೇಡಿಕೆಗಳ ಕುರಿತು ಯಾವುದೇ ಪ್ರತಿಕ್ರಿಯೆ ಬರದ ಕಾರಣ ಸೆಪ್ಟೆಂಬರ್ 2ರಂದು ಬಿ. ಇ. ಎಫ್. ಐ.ಗೆ ಸೇರಿದ 1 ಲಕ್ಷ ಬ್ಯಾಂಕ್ ನೌಕರರು ರಾಷ್ಟ್ರವ್ಯಾಪಿ ಮುಷ್ಕರ ನಡೆಸುವರೆಂದು ಅಖಿಲ ಭಾರತ ಪ್ರಧಾನಕಾರ್ಯದರ್ಶಿಯವರಾದ ಕಾ|| ಅಶೀಸ್‌ಸೇನ್ ರವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮುಷ್ಕರಯಶಸ್ವಿಗೆ ವಿವಿಧ ರಾಜ್ಯಗಳ ಪದಾಧಿಕಾರಿಗಳ ಮುಖಂಡರ ಸಭೆ ಇತ್ತೀಚೆಗೆ ನಡೆದು ಬರದಿಂದ ಸಿದ್ದತೆ ನಡೆಯುತ್ತಿರುವುದಾಗಿ ತಿಳಿಸಿದ್ದಾರೆ.

ಬಿ.ಇ.ಎಫ್.ಐ. ನೊಡನೆ ಮಾತುಕತೆ, ನೌಕರ ಸಂಘದ ಹಕ್ಕುಗಳ ಮೇಲಿನ ದಾಳಿಯ ವಿರುದ್ಧ ಹೊಸ ನೇಮಕಾತಿ ನಿಷೇಧಗೊಳಿಸಿರುವುದರ ವಿರುದ್ಧ, ಅಧಿಕ ದುಡಿಮೆ, ಸಾಮೂಹಿಕ ವರ್ಗ, ವಜಾಗೊಳಿಸುವುದು, ಕಂಪ್ಯೂಟರೀಕರಣ, ಯಂತ್ರೀಕರಣ ಹಾಗೂ ಸಮಾನ ದುಡಿಮೆಗೆ ಸಮಾನ ವೇತನದ ಬೇಡಿಕೆಗಳಿಗಾಗಿ ನಡೆಯುವ ಹೋರಾಟದ ಬೇಡಿಕೆಗಳ ಕುರಿತು ಮಾತುಕತೆ ನಡೆಸಲು ಅವರು ಕೇಂದ್ರ ಸರ್ಕಾರ ಮತ್ತು ಐ.ಬಿ.ಎ.ಗೆ ಕರೆ ನೀಡಿದ್ದಾರೆ. ಮಾತುಕತೆ ನಡೆಸುವಲ್ಲಿ ವಿಫಲವಾದರೆ ಮುಷ್ಕರ ಅನಿವಾರ್ಯವೆಂದು ಘೋಷಿಸಿದ್ದಾರೆ.

ಬಿ.ಇ.ಎಫ್.ಐ.ನ ಕರೆಯಂತೆ ಸೆಪ್ಟೆಂಬರ್ 2 ರಂದು ನಡೆಯುವ ಅಖಿಲ ಭಾರತ ಮುಷ್ಕರದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುವುದಾಗಿ ರಿಸರ್ವ ಬ್ಯಾಂಕ್ ಎಂಪ್ಲಾಯಿಸ್ ಅಸೋಷಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ○

ಕಾಂಟ್ರಾಕ್ಟ್ ಕಾರ್ಮಿಕರ ಸತ್ಯಾಗ್ರಹ

ರಾಯಚೂರು ಶಾಖೋತ್ಪನ್ನ ಕೇಂದ್ರದಲ್ಲಿ ಕಾಂಟ್ರಾಕ್ಟ್ ಕಾರ್ಮಿಕರಾಗಿ ದುಡಿಯುತ್ತಿರುವ ಕಾರ್ಮಿಕರು ಜುಲೈ 28ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಈ ಕಾರ್ಖಾನೆಯಲ್ಲಿ ಸುಮಾರು 500 ಕಾರ್ಮಿಕರು ಕಂಟ್ರಾಕ್ಟ್ ಪದ್ಧತಿಯಡಿ ದುಡಿಯುತ್ತಾ ತೀವ್ರ ಶೋಷಣೆಗೆ ತುತ್ತಾಗಿದ್ದಾರೆ. ನಿರ್ಮಾಣ ಹಂತದಲ್ಲಿ ಸಾವಿರಾರು ಕಾರ್ಮಿಕರು ಕಂಟ್ರಾಕ್ಟ್ ಪದ್ದತಿಯಡಿ ದುಡಿದು ಉದ್ಯೋಗ ಭದ್ರತೆಯಿಲ್ಲದೆ ಕೆಲಸ ಕಳೆದುಕೊಂಡು ಬೀದಿ ಪಾಲಾಗಿದ್ದಾರೆ.

ರಾಜ್ಯ ಸರ್ಕಾರದ ನೇರ ಆಡಳಿತದಲ್ಲಿರುವ ಕೆ.ಪಿ.ಸಿ. (ಕರ್ನಾಟಕ ಪವರ್ ಕಾರ್ಪೊರೇಶನ್) ಯ ಹಲವಾರು ಕೈಗಾರಿಕೆಗಳಲ್ಲಿ ಸಾವಿರಾರು ಸಂಖ್ಯೆಯ ಕಾಂಟ್ರಾಕ್ಟ್ ಕಾರ್ಮಿಕರು ದುಡಿಯುತ್ತಿದ್ದು ಕಾರ್ಮಿಕ ಕಾನೂನುಗಳ ಪ್ರಕಾರ ಸಿಗಬೇಕಾದ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

ಜುಲೈ 16 ರಿಂದ 23ರವರೆಗೆ ರಾಯಚೂರು ಶಾಖೋತ್ಪನ್ನ ಕೇಂದ್ರದ ಕಾಂಟ್ರಾಕ್ಟ್ ಕಾರ್ಮಿಕರು ಬೇಡಿಕೆ ಸಪ್ತಾಹವನ್ನು ಆಚರಿಸಿದ್ದರು. ಜುಲೈ 22ರಂದು ಸೈಕಲ್ ಜಾಥಾ ಸಂಘಟಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಇದರಿಂದ ಯಾವುದೇ ಪ್ರಯೋಜನ ಆಗದಿರುವುದರಿಂದ ಜುಲೈ 28 ರಿಂದ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ. ಕಾಂಟ್ರಾಕ್ಟ್ ಕಾರ್ಮಿಕರನ್ನು ಕರ್ನಾಟಕ ಪವರ್ ಕಾರ್ಪೊರೇಶನ್ ನೇರವಾಗಿ ನೇಮಕ ಮಾಡಿಕೊಂಡು ಕಾರ್ಮಿಕ ಕಾನೂನುಗಳ ಪ್ರಕಾರ ಸಿಗಬೇಕಾದ ಸೌಲಭ್ಯಗಳನ್ನು ನೀಡಬೇಕೆಂಬುದೇ ಪ್ರಮುಖ ಬೇಡಿಕೆಯಾಗಿದೆ. ●

ವಾಮಂಜೂರು ಬೀಡಿ ಯೂನಿಯನ್ ವಾರ್ಷಿಕ ಸಭೆ

ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘ(ಸಿ.ಐ.ಟಿ ಯು.)ನ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಕೆ.ಮುಂಡಪ್ಪನವರ ಅಧ್ಯಕ್ಷತೆಯಲ್ಲಿ ದಿನಾಂಕ 26-6-1987 ರಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ತಿರುವೈಲಿನಲ್ಲಿ ಜರಗಿತು.

ಮೊದಲಿಗೆ ಸಂಘದ ಕಾರ್ಯದರ್ಶಿ ಕೆ. ಗಂಗಯ ಅಮೀನರವರುಸ್ವಾಗತಿಸಿದರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದ.ಕ.ಜಿಲ್ಲಾ ಬೀಡಿ ಫೆಡರೇಷನ್ ಕಾರ್ಯದರ್ಶಿ ಯು.ಬಿ. ಲೋಕಯ್ಯನವರು ಬೀಡಿ ಮಜೂರರ ಇಂದಿನ ಸಮಸ್ಯೆಗಳನ್ನು ವಿವರಿಸಿದ್ದು ಮಾತ್ರವಲ್ಲದೆ ಮಜೂರರು ಸಂಘಟಿತರಾಗದೆ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು. ಅಖಿಲ ಭಾರತ ಕಿಸಾನ್‌ಸಭಾದ ಕರೆಯಂತೆ ನಡೆಯುವ ಮುಷ್ಕರಕ್ಕೆ ಸಭೆಯು ಬೆಂಬಲ ಸಾರಿತು. ಮಜೂರಿಯಲ್ಲಿ ಹೆಚ್ಚಳ ಹಾಗೂ 20 ಶೇಕಡ ಬೋನಸ್ಸಿಗಾಗಿ ಒತ್ತಾಯಿಸಿ ಹೋರಾಟನಡೆಸಬೇಕೆಂದು ಸಭೆಯು ತೀರ್ಮಾನಿಸಿತು.

ಬೀಡಿ ಯೂನಿಯನ್‌ಗೆ ಕೆ. ಮುಂಡಪ್ಪ ಅಧ್ಯಕ್ಷರಾಗಿಯೂ, ಕೆ.ಗಂಗಯ ಅಮೀನ್ ಕಾರ್ಯದರ್ಶಿಯಾಗಿಯೂ ಪುನರಾಯ್ಕೆಗೊಂಡರು. ದೇವಕಿ ಮತ್ತು ವಿ.ಚನ್ನಪ್ಪ ಉಪಾಧ್ಯಕ್ಷರಾಗಿಯೂ, ಪುಷ್ಪ ಹಾಗೂ ಗೋಪಾಲ ಟಿ. ಜತೆಕಾರ್ಯದರ್ಶಿಯಾಗಿಯೂ, ಬಿ.ಕೃಷ್ಣಪ್ಪ ಕೋಶಾಧಿಕಾರಿಗಳಾಗಿ ಆಯ್ಕೆಗೊಂಡರು. 20 ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಸಭೆಯ ಕೊನೆಗೆ ಕೋಶಾಧಿಕಾರಿ ಬಿ. ಕೃಷ್ಣಪ್ಪನವರು ಧ್ಯನವಾದ ಅರ್ಪಿಸಿದರು. ○

ಚುನಾವಣೆ ಜಯ

ಭಾರತೀಯ ವಿಜ್ಞಾನ ಮಂದಿರ (ಟಾಟಾ ಇನ್ಸ್‌ಟಿಟ್ಯೂಟ್ ನೌಕರರ ಸಂಘಕ್ಕೆ ಆಗಸ್ಟ್ 13 ರಂದು ನಡೆದ ಚುನಾವಣೆಯಲ್ಲಿ ಅಬ್ದುಲ್ ಮಜೀದ್ (ಅಧ್ಯಕ್ಷ) ಎಂ.ನಾರಾಯಣಸ್ವಾಮಿ (ಮೊದಲ ಉಪಾಧ್ಯಕ್ಷ), ಚನ್ನರಾಯ (2ನೇ ಉಪಾಧ್ಯಕ್ಷ), ಕಾ||ಜಿ.ರಾಮು (ಪ್ರಧಾನ ಕಾಯದರ್ಶಿ), ಕಾ||ಎನ್. ವೆಂಕಟ ಸುಬ್ಬಯ್ಯ(ಜಂಟಿ ಕಾರ್ಯದರ್ಶಿ), ಪಿ.ವೆಂಕಟಪ್ಪ (ಮೊದಲ ಜಂಟಿ ಕಾರ್ಯದರ್ಶಿ), ತೋಪಯ್ಯ (ಎರಡನೆಯ ಸಹ ಕಾರ್ಯದರ್ಶಿ), ರಾಫೆಲ್ ಪಿ.ಎಂ.ರವರು ಖಜಾಂಚಿಯಾಗಿ ಚುನಾಯಿತರಾಗಿರುತ್ತಾರೆ. ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ಕಾರ್ಯದರ್ಶಿಗಳಾದ ಕಾ.ವಿ.ಜೆ.ಕೆ ನಾಯರ್‌ರವರು ಈ ಸಂಘದ ಕಾನೂನು ಸಲಹೆಗಾರರು.

ದಾಂಡೇಲಿ

ಜುಲೈ 29ರಂದು ದಾಂಡೇಲಿಯ ಪ್ಲೈವುಡ್ ವರ್ಕರ್ಸ್ ಯುನಿಯನ್‌ಗೆ ನಡೆದ ಚುನಾವಣೆಯಲ್ಲಿ ಸಂಘದ ಅಧ್ಯಕ್ಷರಾಗಿ ಕಾ||ವಿ.ಜೆ.ಕೆ.ನಾಯರ್ ಕಾ||ಹರೀಶ್ ನಾಯಕ (ಉಪಾಧ್ಯಕ್ಷ), ಕಾ||ಅಕ್ರಮಖಾನ್(ಪ್ರಧಾನ ಕಾರ್ಯದರ್ಶಿ) ಯವರಾಗಿ ಅವಿರೋಧವಾಗಿ ಆಯ್ಕೆಗೊಂಡರು. ಸಹಕಾರ್ಯದರ್ಶಿಯಾಗಿ ಕಾ||ಪೌಲವೇದನಾಯಕ್, ಖಜಾಂಚಿಯಾಗಿ ಕಾ||ಪುಲ್ಲಯ್ಯ ಚುನಾಯಿತರಾದರು. 95% ಮತದಾನವಾಗಿತ್ತು. ಕಾ ಟಿ.ಎಸ್.ನಾಯಕ್ ರವರುಚುನಾವಣಾಧಿಕಾರಿಯಾಗಿದ್ದರು ○

ಪಂಜಾಬ್ ನಿಧಿಗೆ ಕೇಂದ್ರಸಮಿತಿ ಕರೆ

ಅಮೇರಿಕನ್ ಸಾಮ್ರಾಜ್ಯಶಾಹಿ ಹಾಗೂ ಪಾಕಿಸ್ತಾನ್ ಮಿಲಿಟರಿ ಸರ್ಕಾರಗಳ ಬೆಂಬಲ ಪಡೆದು ಪಂಜಾಬಿನಲ್ಲಿ ಅಮಾಯಾಕ ಜನತೆಯ ಹತ್ಯೆ ಮಾಡುತ್ತಿರುವ ಭಯೋತ್ಪಾದಕರನ್ನು ಧೈರ್ಯದಿಂದ ಎದುರಿಸಿ ಜನತೆಯುನ್ನು ಎಚ್ಚರಗೊಳಿಸುತ್ತಿರುವ ಪಕ್ಷದ ಪಂಜಾಬ್ ರಾಜ್ಯ ಸಮಿತಿಯನ್ನು ಪಕ್ಷದ ಕೇಂದ್ರ ಸಮಿತಿ ಅಭಿನಂದಿಸಿದೆ.

ದೇಶದ ಐಕ್ಯತೆ-ಪ್ರಜಾಸತ್ತೆಯನ್ನು ಎತ್ತಿಹಿಡಿದು ಭಯೋತ್ಪಾದಕರ ವಿರುದ್ಧ ಸೆಣಸುತ್ತಾ ಹುತಾತ್ಮರಾದ ಪಕ್ಷದ ರಾಜ್ಯ ಧುರೀಣರಾದ ಕಾ|| ಚನ್ನನ್‌ಸಿಂಗ್‌ದೂತ್, ದೀಪಕ್‌ದಾವನ್, ಯುವ ನೇತಾರ ಕಾ||ಗುರುನಾಮ್‌ಸಿಂಗ್‌ಉತ್ಪಾಲ್ ಮುಂತಾದ 9 ಮಂದಿ ಅಮೂಲ್ಯ ಸಂಗಾತಿಗಳು ಪ್ರಾಣಾರ್ಪಣೆಗೈದು ಚಾರಿತ್ರಿಕ ದಾಖಲೆ ನಿರ್ಮಿಸಿದ್ದಾರೆ.

ಪಂಜಾಬ್‌ನ ಇಂತಹ ಗಂಭೀರ ರಾಜಕೀಯ ಪರಿಸ್ಥಿತಿ ಎದುರಿಸಿ ಹೋರಾಡುತ್ತಿರುವ ಕಾರ್ಯಕರ್ತರ ಸ್ವಯಂ ರಕ್ಷಣೆ ಪಡೆಯುವಂತಾಗಲು, ಸ್ವಯಂ ಸೇವಕ ಪಡೆಯನ್ನು ಸನ್ನದ್ಧಗೊಳಿಸುವ ನಿಟ್ಟನಲ್ಲಿ ಕೇಂದ್ರಸಮಿತಿ ಈಗಾಗಲೇ 1ಲಕ್ಷರೂ| ಹಣವನ್ನು ನೀಡಿದೆ. ಪಕ್ಷದ ಸದಸ್ಯರು, ಹಿತೈಷಿಗಳು, ಎಡ ಪ್ರಜಾಸತ್ತಾತ್ಮಕ ದೇಶಾಭಿಮಾನಿ ಜನತೆ ಉದಾರವಾಗಿ ಧನಸಹಾಯ ನೀಡಲು ಪಕ್ಷ ಕರೆ ನೀಡಿದೆ. ಹಣವನ್ನು ಚೆಕ್ ಡ್ರಾಫ್ ಮೂಲಕ ನೇರವಾಗಿ ದೆಹಲಿಯ ಕಮ್ಯೂನಿಸ್ಟ್ ಪಾರ್ಟಿಆಫ್ ಇಂಡಿಯಾ ಮಾರ್ಕ್ಸಿಸ್ಟ್ ವಿಳಾಸಕ್ಕೆ ಕಳುಹಿಸುವಂತೆ ವಿನಂತಿಸಿದೆ. ○

ವೀವರ್ಸ್ ಯೂನಿಯನ್ ಮಹಾ ಸಭೆ

ಎಸ್.ಕೆ. ವೀವರ್ಸ್ ಯುನಿಯನ್‌ನ 47ನೇಯ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷ ಕೆ.ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಆಗಸ್ಟ್ 10 ರಂದು ಸೇರಿತು. ಕಾ||ಕೆ.ಪೂವಪ್ಪ ಸ್ವಾಗತಿಸಿ ಕಳೆದ ವರ್ಷದ ವರದಿ ಮಂಡಿಸಿದರು. ವರದಿ ಲೆಕ್ಕಪತ್ರವನ್ನು ಸರ್ವಾನುಮತದಿಂದ ಅಂಗೀಕರಿಸಿತು. ಕೇಂದ್ರ-ರಾಜ್ಯ ಸರ್ಕಾರಗಳ ಬೆಲೆ ಏರಿಕೆಯನ್ನು ಖಂಡಿಸುವ ರೈತ ಚಳುವಳಿಗೆ ಬೆಂಬಲಿಸಿ ಪಿಕೆಟಿಂಗ್‌ನಲ್ಲಿ ಪಾಲ್ಗೊಳುವ ನಿರ್ಣಯ ಕೈಗೊಂಡಿತು. ಸಿ.ಐ.ಟಿ.ಯು. ರಾಜ್ಯ ಉಪಾಧ್ಯಕ್ಷ ಕಾ||ಬಿ.ಮಾಧವ ರಾಷ್ಟ್ರ ಅಂತರ ರಾಷ್ಟ್ರೀಯ ಪರಿಸ್ಥಿತಿ ಯುದ್ಧ ಅಪಾಯ, ಶಾಂತಿಗಾಗಿ ಸೋವಿಯೆತ್ ನಡೆಸುತ್ತಿರುವ ಹೋರಾಟ, ಕಾರ್ಮಿಕ ವರ್ಗದ ಕರ್ತವ್ಯವನ್ನು ವಿವರಿಸಿದರು. ಹಳಪೆ ಬೀಡಿ ಯುನಿಯನ್‌ನ ಕಾ||ಜಿ. ಬಾಲಕೃಷ್ಣಶೆಟ್ಟಿ ಶುಭ ಕೋರಿ ಮಾತನಾಡಿದರು. ಪ್ರಸಕ್ತ ಸಾಲಿಗೆ ಯುನಿಯನ್‌ಗೆ ಕಾ||ಕೆ.ತಿಮ್ಮಪ್ಪ(ಅಧ್ಯಕ್ಷ), ಕೆ.ಮೂಸಬ್ಬ, ಕೆ.ವೀರಪ್ಪ(ಉಪಾಧ್ಯಕ್ಷರು), ಕೆ.ಪೂವಪ್ಪಸಾಲಿಯಾನ(ಕಾರ್ಯದರ್ಶಿ), ಎಂ.ಕೃಷ್ಣಶೆಟ್ಟಿ, ಕೆ. ಪಕೀರ(ಜೊತೆ ಕಾರ್ಯದರ್ಶಿಗಳು) ಕೆ.ಮಾರಪ್ಪ ಕೋಶಾಧಿಕಾರಿಯಾಗಿರುವ 21ಮಂದಿ ಕಾರ್ಯಕಾರಿ ಸಮಿತಿಯನ್ನು ಆರಿಸಿತು. ●

ವಿದ್ಯಾರ್ಥಿ ಚಳುವಳಿ ಸುವರ್ಣ ಮಹೋತ್ಸವ

ಭಾರತದಲ್ಲಿ ವಿದ್ಯಾರ್ಥಿ ಚಳುವಳಿಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಂಡು ಆಗಸ್ಟ್ 11ರಂದು ಮುಕ್ತಾಯ ಸಮಾರಂಭವನ್ನು ಧಾರವಾಡ ಎಸ್.ಎಫ್.ಐ. ಜಿಲ್ಲಾ ಸಮಿತಿ ಏರ್ಪಡಿಸಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿಮಾತನಾಡಿದ ಪ್ರೊ||ವಿ.ಎನ್. ದೇಶಪಾಂಡೆಯವರು 'ವಿದ್ಯಾರ್ಥಿ ಚಳುವಳಿಯ ಇತಿಹಾಸ' ಕುರಿತು ಮಾತನಾಡಿದರು. [illegible] ಪ್ರಕಾಶ ಉಡಿಕೇರಿ ಅಧ್ಯಕ್ಷತೆ ವಹಿಸಿದ್ದರು. ವಿಜಯರಾಯರೆಡ್ಡಿ ಸ್ವಾಗತಿಸಿ ಕಾ. ಪಾರ್ವತಿ ಕಲಾಲ ವಂದನಾರ್ಪಣೆ ಮಾಡಿದರು. ಹೋರಾಟದ ಸವಿನೆನಪು ಮುಂದೆ ನಮಗೆ ದಾರಿ ದೀಪವಾಗಲಿ ಎಂದು ಹಾಗೂ ಸಂಘಟನೆಯನ್ನು ಬಲಿಷ್ಟಗೊಳಿಸುವುದಾಗಿ ಪ್ರತಿಜ್ಞೆಗೈದರು.

[4ನೇ ಪುಟದಿಂದ]

ಪಾಕಿಸ್ತಾನವನ್ನು ತನ್ನ ಜೀತದಾಳಿನಂತೆ ಬಳಸಿಕೊಳ್ಳುತ್ತಿದೆ. ಅರಬ್ ರಾಷ್ಟ್ರಗಳ ಪ್ರತಿಗಾಮಿ ಆಧಿಪತ್ಯಗಳನ್ನು ರಕ್ಷಿಸಲು ಅಮೇರಿಕಾ ಪಾಕಿಸ್ತಾನವನ್ನೊಂದು ಸಾಧನವಾಗಿಯೂ ಉಪಯೋಗಿಸಿಕೊಳ್ಳುತ್ತಿದೆ. ಇವೆಲ್ಲ ಪಾಕಿಸ್ತಾನದ ಜನತೆಯನ್ನು ಮುಕ್ತವಾಗಿ ಬದುಕ ಬಯಸುವ ತೃತೀಯ ಜಗತ್ತಿನ ಇತರ ರಾಷ್ಟ್ರಗಳ ಮುಖ್ಯವಾಹಿನಿ ಮತ್ತು ಆಶಯದಿಂದ ಬೇರ್ಪಡಿಸಿ ಬಿಟ್ಟದೆ. ಭಾರತದ ವಿರುದ್ದ ದಿನನಿತ್ಯ ಹಬ್ಬಿಸಲಾಗುತ್ತಿರುವ ದ್ವೇಷ ಭಾವನೆಗಳಿಂದ ಪಾಕಿಸ್ತಾನದ ಜನತೆಗೂ ಜಿಗುಪ್ಸೆಯುಂಟಾಗಿರುವುದು ಸಹಜ. ಪರಸ್ಪರ ಸ್ನೇಹ ಸಂಬಂಧಗಳಿರಬೇಕಾದಲ್ಲಿ ನಿರಂತರ ಸಂಶಯ, ಭಯ, ಸೃಷ್ಟಿಸಲ್ಪಟ್ಟಿರುವುದು ಪಾಕಿಸ್ತಾನದ ಜನತೆಗೂ ಅರ್ಥವಾಗಿದೆ. ತಮ್ಮ ಸ್ನೇಹಿತರು ಯಾರು, ಶತ್ರುಗಳು ಯಾರು ಎನ್ನುವುದನ್ನು ಅವರು ಕಳೆದ ನಾಲ್ಕು ದಶಕಗಳ ಅನುಭವದಿಂದ ಕಂಡುಕೊಂಡಿದ್ದಾರೆ. ಹಾಗಾಗಿ ಗಡಿಯಾಚೆಗಿನ ಭಾರತೀಯ ಜನತೆಯ ಕುರಿತು ಅವರ ಅಭಿಮಾನ, ಸ್ನೇಹ ಹೆಚ್ಚು ಹೆಚ್ಚಾಗಿ ಪ್ರಕಟವಾಗುತ್ತಿದೆ. ಈ ಸ್ನೇಹ, ಗೌರವಾದರಗಳು ಉಳಿಯಬೇಕಾದರೆ ತಮ್ಮ ದೇಶವನ್ನು ಬೂಟುಗಾಲಿನಿಂದ ಆಳುತ್ತಿರುವ ಸೈನಿಕ ಆಡಳಿತೆ ತೊಲಗಿ ಪ್ರಜಾಪ್ರಭುತ್ವ ನೆಲೆಗೊಳ್ಳಬೇಕು; ಸಾಮ್ರಾಜ್ಯಶಾಹಿಯ ಶೋಷಣೆಯಿಂದ ಪಾಕಿಸ್ತಾನ ಬಿಡುಗಡೆಯಾಗಬೇಕು ಮತ್ತು ವಿವಿಧ ದೇಶೀ ಜನಾಂಗಗಳು ಹಾಗೂ ಪ್ರಾಂತ್ಯಗಳ ನಡುವೆ ಸಮಾನತೆ ಬೆಳೆದು ಬರಬೇಕೆಂಬ ಬೇಡಿಕೆಗೆ ಪಾಕಿಸ್ತಾನದ ಕಾರ್ಮಿಕ ವರ್ಗ, ರೈತರು, ವಿದ್ಯಾರ್ಥಿಗಳು, ಬುದ್ಧಿ ಜೀವಿಗಳು, ಮಹಿಳೆಯರು ಮತ್ತಿತರ ವರ್ಗದ ಜನತೆ ಹೆಚ್ಚು ಹೆಚ್ಚಾಗಿ ಒಲಿಯುತ್ತಿದ್ದಾರೆ. ದೇಶದ ವಿಭಜನೆಯ ಬಳಿಕ ನಡೆದ ಹಿಂಸಾಚಾರಗಳಿಂದಾಗಿ ಬೆಳೆದು ಬಂದಿದ್ದ ಭಾರತ ವಿರೋಧಿ ಭಾವನೆ ನಿಧಾನವಾಗಿ ತೊಲಗಿ ಪಾಕಿಸ್ತಾನದ ಜನತೆ ಅಮೇರಿಕನ್ ಸಾಮ್ರಾಜ್ಯಶಾಹಿಯನ್ನು ವಿರೋಧಿಸಲಾರಂಬಿಸಿದ್ದಾರೆ. ಎಮ್.ಆರ್.ಡಿ.ಯ ಹುಟ್ಟು ಮತ್ತು ಬೆಳವಣಿಗೆಗೆ ಈ ಹಿನ್ನೆಲೆಯಿದೆ. ನಮ್ಮ ದೇಶದ ಎಡಪ್ರಜಾಸತ್ತಾತ್ಮಕ ಶಕ್ತಿಗಳು ಪಾಕಿಸ್ತಾನದಲ್ಲಿ ಬೆಳೆದು ಬರುತ್ತಿರುವ ಈ ಮನೋಭಾವ ಮತ್ತು ಪ್ರವೃತ್ತಿಯನ್ನು ಅವಶ್ಯವಾಗಿ ಗಮನಿಸಬೇಕು. ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ಅದು ಬಲಗೊಳ್ಳುವಂತೆ ಮಾಡಬೇಕು. ○

ಈ ಮನುಷ್ಯ – ಗೋಬಚೇವ್ – ತುಂಬಾ ಅಪಾಯಕಾರಿ !

ಸೋವಿಯೆತ್ ಒಕ್ಕೂಟದ ನಾಯಕತ್ವ, ಒಂದರ ಹಿಂದೊಂದು ಎಡೆ ಬಿಡದೆ ಶಾಂತಿಯ ಮಹಾಸ್ತ್ರಗಳನ್ನು ಎಸೆಯುತ್ತಾ ಜಗತ್ತಿನ ಸಾಮ್ರಾಜ್ಯಶಾಹಿಗಳನ್ನು ಕಂಗೆಡಿಸಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಶಾಂತಿ ಬಾಣಗಳು ಸಾಮ್ರಾಜ್ಯಶಾಹಿ ದೇಶಗಳ ಜನತೆಯ ಮೇಲೆ ಬೀರುತ್ತಿರುವ ಪರಿಣಾಮವೇನು ? ಇದು ಈ ದೇಶಗಳ ಪ್ರತಿಗಾಮಿ ನಾಯಕತ್ವದ ಮೇಲೆ ತರುತ್ತಿರುವ ಒತ್ತಡವೇನು ? ಪ.ಜರ್ಮನಿಯ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷದ ನಾಯಕ ಇಗಾನ್‌ಬಾಹ್ರ್ 'ವೊರ್ವಾರ್ಟ್ಸ್' ಪ್ರತಿಕೆಯಲ್ಲಿ ಪ್ರಕಟಿಸಿದ ಲೇಖನದ ಸಂಕ್ಷಿಪ್ತಾನುವಾದ.

'ಈ ಮನುಷ್ಯ (ಗೋರ್ಬಚೇವ್) ತುಂಬಾ ಅಪಾಯಕಾರಿ' ಎನ್ನುವುದು ಪಶ್ಚಿಮ ಜರ್ಮನಿಯ ರಾಜಕೀಯ ವರ್ತುಲಗಳಲ್ಲಿ ಇದೀಗಪದೇ ಪದೇ ಕೇಳಿ ಬರುತ್ತಿರುವ ಮಾತು. ಈತ ತುಂಬಾ ಅಪಾಯಕಾರೀ–ಯಾಕೆಂದರೆ ತೀರಾ ಅಚ್ಚರಿ ಹುಟ್ಟಿಸುವಷ್ಟು ಅಲ್ಪ ಕಾಲದಲ್ಲಿ ಆತ ಪೂರ್ವ–ಪಶ್ಚಿಮ ಸಂಬಂಧಗಳ ಸುಧಾರಣೆಯಲ್ಲಿ ಮಹತ್ವಪೂರ್ಣ ಸಾಧನೆ ಮಾಡಿದ್ದಾರೆ, ಮಾತುಕತೆಗಳಿಗೆ ಒಂದು ತಾತ್ವಿಕ ನೆಲೆ ಒದಗಿಸಿದ್ದಾರೆ; ಪಾಶ್ಚಾತ್ಯ ದೇಶಗಳ ಅನೇಕ ಮಂದಿಗೆ ಸಮಗ್ರವಾದ ತಿಳುವಳಿಕೆಯೇ ಇಲ್ಲ. ಅವರ ತಲೆ ತುಂಬಾ ಸೊನ್ನೆ ತುಂಬಿದೆ ಎನ್ನುವುದನ್ನೂ ಆತ ತೋರಿಸಿಕೊಟ್ಟಿದ್ದಾರೆ; 'ಪಶ್ಚಿಮ ಜರ್ಮನಿಯಲ್ಲಿ ನಡೆಸಲಾದ ಸಾರ್ವಜನಿಕ ಅಭಿಪ್ರಾಯ ಸಂಗ್ರಹವೊಂದರಲ್ಲಿ ಸೋವಿಯೆತ್ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಅಮೇರಿಕಾದ ಅಧ್ಯಕ್ಷ ರೀಗನ್‌ಗಿಂತ ಹೆಚ್ಚು ಜನಪ್ರಿಯತೆ ಗಳಿಸಿದ್ದಾರೆ. ವಿಶ್ವಶಾಂತಿ ಮತ್ತು ನಿಶ್ಶಸ್ತ್ರೀಕರಣ ಪ್ರಶ್ನೆಯಲ್ಲಿ ಜರ್ಮನಿಯ ಜನ ರೀಗನ್‌ಗಿಂತ ಗೋರ್ಬಚೇವ್ ಅವರನ್ನೇ ಹೆಚ್ಚು ನಂಬುತ್ತಿದ್ದಾರೆ. ಮೂರು ವರ್ಷಗಳ ಹಿಂದೆ ಈ ಮಾತನ್ನು ಯಾರಾದರೂ ಹೇಳಿದ್ದರೆ ಬಹುಶಃ ಜನ ಅವರನ್ನು ತಲೆ ತಿರುಕರೆನ್ನುತ್ತಿದ್ದರು.

'ಈ ಹಿಂದೆ ಸೋವಿಯೆತ್ ಒಕ್ಕೂಟದ ಆಂತರಿಕ ವಿದ್ಯಮಾನಗಳ ಕುರಿತು ತಲೆ ಕೆಡಿಸಿಕೊಳ್ಳುತ್ತಿದ್ದವರು ಸೋವಿಯೆತ್ ಒಕ್ಕೂಟವನ್ನೇ ಅಧ್ಯಯನದ ವಿಷಯವಾಗಿ ತೆಗೆದುಕೊಂಡಿದ್ದ ವಿಶೇಷ ತಜ್ಞರು ಮಾತ್ರ. ಆದರೆ ಈಗ 'ಗ್ಲಾಸ್‌ನಸ್ಕ್' 'ಪೆರೆಸ್ತ್ರೋಯಿಕಾ' ಮುಂತಾದ ಶಬ್ದಗಳು ಪ.ಜರ್ಮನಿಯ ಕಾರ್ಖಾನೆಗಳಲ್ಲೂ ಚರ್ಚಿಸಲ್ಪಡುತ್ತಿವೆ. ಸೋವಿಯೆತ್ ಒಕ್ಕೂಟದಲ್ಲಿ ಆಗುತ್ತಿರುವ ಸುಧಾರಣೆಗಳ ಸುದ್ಧಿ ಪಾಶ್ಚಾತ್ಯ ರಾಷ್ಟ್ರಗಳ ಪತ್ರಿಕೆಗಳಲ್ಲಿ ಮುಖಪುಟವನ್ನು ಅಲಂಕರಿಸುತ್ತಿವೆ. 'ಅಣು ಅಸ್ತ್ರನಿಷೇಧ', 'ವಿಶ್ವಶಾಂತಿ' 'ಮಾತು ಕತೆಗಳು' ಮುಂತಾದ ಪದಗಳು ಮರಳಿ ಗೌರವದ ಸ್ಥಾನಗಳಿಸಿಕೊಳ್ಳುತ್ತಿವೆ. ಪ.ಜರ್ಮನಿಯ ಆಂತರಿಕ ರಾಜಕೀಯ ಕೂಡ 'ಗೋರ್ಬಚೇವ್‌ವಾದ' ದಿಂದ ಪ್ರಭಾವಿತವಾಗದೆ ಉಳಿದಿಲ್ಲ. ಗೋರ್ಬಚೇವ್ ಅವರ ಹೆಸರಿನೊಂದಿಗೆ ಪ.ಜರ್ಮನಿಯ ಹೆಚ್ಚು ಹೆಚ್ಚು ಜನ ತಮ್ಮ ಆಶಯಗಳನ್ನು ಗುರುತಿಸಿಕೊಳ್ಳುತ್ತಿದ್ದರೆ, ಅವರ ಹೊಸ ಪ್ರಸ್ತಾಪಗಳನ್ನು ಸಂಶಯದಿಂದ ನೋಡುತ್ತಿರುವವರ ಸಂಖ್ಯೆ ಕಮ್ಮಿಯಾಗುತ್ತಿದೆ. ಸೂರ್ಯ ಪೂರ್ವದಲ್ಲಿ ಹುಟ್ಟುತ್ತಾನೆ, ಪಶ್ಚಿಮದಲ್ಲಿ ಮುಳುಗುತ್ತಾನೆ ಎಂಬ ದಿನ ನಿತ್ಯದ ವಿಷಯವೂ ಗೋರ್ಬಚೇವ್‌ರ ಬಾಯಲ್ಲಿ ಬಂದಾಗ ವಿಶೇಷ ಅರ್ಥ ಪಡೆದುಕೊಳ್ಳುತ್ತದೆ ಎಂಬುದನ್ನು ಜನ ಗುರುತಿಸಬೇಕಾಗಿದೆ ಎಂದರೆ ಆತ ತೀರ ಅಪಾಯಕಾರಿ ಮನುಷ್ಯನಾಗಿರದಿದ್ದೀರಲೇ ಬೇಕು.

ಪ.ಜರ್ಮನಿಯ ಜನಕ್ಕೆ ಏನು ಬೇಕು ?

ಪ.ಜರ್ಮನಿಯ ಜನಕ್ಕೆ ಬೇಕಾಗಿರುವುದು ಏನು ? ಅವರಿಗೆ ಶಾಂತಿಯಿಂದ ಬಾಳುವುದು ಬೇಕಾಗಿದೆ; ಯುದ್ಧದ ಭೀತಿ ಬೇಕಾಗಿಲ್ಲ; ಶಸ್ತ್ರಸಂಗ್ರಹ ಬೇಕಾಗಿಲ್ಲ; ನಿಶ್ಶಸ್ತ್ರೀಕರಣ ಬೇಕಾಗಿದೆ. ಪಶ್ಚಿಮದ ರಾಷ್ಟ್ರಗಳು ಯುದ್ಧದ ಬೆದರಿಕೆ ಹಾಕಬೇಕಿದಿದ್ದರೆ ಪೂರ್ವದ ರಾಷ್ಟ್ರಗಳಿಂದ ಅಂತಹ ಬೆದರಿಕೆ ಬರಲಾರದು–ಎನ್ನುವುದೂ ಅವರಿಗೆ ಗೊತ್ತಾಗಿದೆ. ಗೋರ್ಬಚೇವ್ ಮಾಡುತ್ತಿರುವುದೂ ಇದನ್ನೇ. ಸೋವಿಯೆತ್ ಒಕ್ಕೂಟದ ಹೊಸ ಶಾಂತಿ ಪ್ರಸ್ತಾಪಗಳು ಪ.ಜರ್ಮನಿಯಾ ಬಹುಸಂಖ್ಯಾತ ಜನರ ಹೃದಯವನ್ನು ಗೆದ್ದುಕೊಂಡಿವೆ; ಆದ್ದರಿಂದ ಪ್ರಭಾವಿತರಾಗದಿದ್ದವರು ಕೆಲವೇ ಜನ ಮಾತ್ರ. 'ಪರಸ್ಪರ ಅಪನಂಬುಗೆಯೇ ಯುದ್ಧಗಳಿಗೆ ಮೂಲ. 'ಸೋವಿಯತ್ ಒಕ್ಕೂಟವನ್ನು ನಂಬಬಹುದೇ?', ಎಂಬ ಪ್ರಶ್ನೆ ಕೇಳಿಬರುವುದಕ್ಕೆ ಯೋಚನೆಗಳ ಬದಲು ಅಲ್ಲಿ ಶಬ್ದಗಳೇ ಗುಲ್ಲು ಮಾಡುತ್ತಿರುವುದು ಕಾರಣ. 'ನಂಬುಗೆ ಅನುಭವದಿಂದ ಬೆಳೆಯಲು ಸಾಧ್ಯ. ಒಬ್ಬರು ನೀಡುತ್ತಿರುವ ಪ್ರಸ್ತಾಪಗಳನ್ನು ಸರಿಯಾಗಿ ಪರಿಶೀಲಿಸದೆ ಅವರನ್ನು ನಂಬಬಹುದೇ ಇಲ್ಲವೇ ಎನ್ನುವ ಪ್ರಶ್ನೆಗೆ ಉತ್ತರಿಸುವುದು ಅಸಾಧ್ಯ. ಮಾತುಗಳಲ್ಲಿ ನಾವೇನು ಸಾಧಿಸಬಹುದು ಎನ್ನುವುದು ಗೊತ್ತಾಗುವುದು ಮಾತುಕತೆಗೆ ಇಳಿದ ಮೇಲೆ ಮಾತ್ರ. ಗೋರ್ಬಚೇವ್ ನಮ್ಮನ್ನು ಮಾತುಕತೆಗೆ ಬರುವಂತೆ ಒತ್ತಾಯಿಸುತಿದ್ದಾರೆ; ಮನವೊಲಿಸುತ್ತಿದ್ದಾರೆ. ಮಾತುಕತೆಗಳೇ ಬೇಡ ಎನ್ನುವವರು ಅನಿವಾರ್ಯ ಸಂಧಾನಕ್ಕೆ ಬರಲೇಬೇಕಾಗಿದೆ. ಅವರ ಯಶಸ್ಸಿನ ಗುಟ್ಟು.

ಸಾಮೂಹಿಕ ರಕ್ಷಣೆ

'ಇಂದಿನ ಅಣುಯುಗದಲ್ಲಿ ರಕ್ಷಣೆಯೆಂದರೆ ಎಲ್ಲಾ ರಾಷ್ಟ್ರಗಳಿಗೂ ಸಮಾನವಾದ ಸಾಮೂಹಿಕ ರಕ್ಷಣೆ ಮಾತ್ರ. ಇದರ ಅರ್ಥ ಎಲ್ಲರಿಗೂ ಸಾಕಷ್ಟು ರಕ್ಷಣಾ ಸಾಮರ್ಥ್ಯವಿರಬೇಕು; ಒಬ್ಬರು ಇನ್ನೊಬ್ಬರ ಮೇಲೆ ಶಸ್ತ್ರಾಸ್ತ್ರದಲ್ಲಿ ಮೇಲಾಟ ನಡೆಸುವ ಪೈಪೋಟಿಯಲ್ಲಿ. ಶಸ್ತ್ರಾಸ್ತ್ರದಲ್ಲಿ ಮೇಲಾಟವೆಂದರೆಯುದ್ಧದ ಬೆದರಿಕೆಗೆ ಬುನಾದಿ. ಇದು ಸೋವಿಯೆತ್ ಒಕ್ಕೂಟದ ವಿಚಾರ ಸರಣಿ. ಸೋವಿಯೆತ್ ಒಕ್ಕೂಟ ಈ ಪ್ರಸ್ತಾಪ ನೀಡಿರುವುದು ಪಾಶ್ಚಾತ್ಯರಾಷ್ಟ್ರಗಳ ತಥಾಕಥಿತ ಬಲಕ್ಕೆ ಹೆದರಿ ಅಲ್ಲ. ಅದು ಐತಿಹಾಸಿಕ ಸತ್ಯವೊಂದನ್ನು ಪ್ರತಿಬಿಂಬಿಸುತ್ತಿದೆ. ಯುದ್ಧಗಳು ಅರ್ಥ ಕಳೆದುಕೊಂಡಿವೆ; ಅದಕ್ಕಾಗಿಯೇ ವಿವಿಧ ವ್ಯವಸ್ಥೆಗಳ ನಡುವೆ ನಿರಂತರ ಶಾಂತಿ ಅಗತ್ಯ. ಕಮ್ಯೂನಿಸ್ಟರು ಈ ಐತಿಹಾಸಿಕ ಅಗತ್ಯಕ್ಕೆ ಅನುಗುಣವಾಗಿ ವರ್ತಿಸುತಿದ್ದೇವೆನ್ನುತ್ತಿದ್ದಾರೆ. ಸೋಶಿಯಲ್ ಡೆಮಾಕ್ರಟರೂ ಅಣುಯುಗದಲ್ಲಿ ಸಾಮೂಹಿಕ ರಕ್ಷಣೆ ಬೇಕೆನ್ನುತ್ತಿದ್ದಾರೆ. ಆದರೆ ಸಂಪ್ರದಾಯವಾದಿಗಳು (ಕನ್ಸರ್ವೇಟಿವ್ಸ್) ಮಾತ್ರ 'ನೋಡೋಣ, ತನ್ನ ಕುಸಿಯುತ್ತಿರುವ ಅರ್ಥ ವ್ಯವಸ್ಥೆಯ ಬಲವಂತಕ್ಕೊಳಗಾಗಿ ಗೋರ್ಬಚೇವ್ ಇನ್ನೂ ಯಾವ ಪ್ರಸ್ತಾಪ ನೀಡುತ್ತಿದ್ದಾರೆನ್ನುವುದನ್ನು ಕಾದು ನೋಡೋಣ, ಅಲ್ಲಿಯ, ತನಕ ಚಹಾ ಗುಟುಕರಿಸುತ್ತಿರೋಣ, ಎನ್ನುವುದು ಪೂರ್ವ-ಪಶ್ಚಿಮಗಳ ಕನ್ಸರ್ವೇಟಿವ್‌ಗಳ ಹಣೆಬರಹವಾಗಿ ಬಿಟ್ಟಿದೆ. ಇಂದಿನ ಕಾಲದ ಅನಿವಾರ್ಯತೆ ಇವರಿಗೆ ಅರ್ಥವಾಗಲೇ ಇಲ್ಲ. ಶಸ್ತ್ರಾಸ್ತ್ರ ಪೈಪೋಟಿಯನ್ನು ನಿಲ್ಲಿಸಿ ಅದಕ್ಕಾಗಿ ವ್ಯಯವಾಗುತ್ತಿದ್ದ ಅಪಾರ ಸಂಪನ್ಮೂಲಗಳನ್ನು ಮೂರನೇ ಜಗತ್ತಿನ ಜನಕೋಟಿಯ ಒಳಿತಿಗಾಗಿ ಬಳಸಿಕೊಳ್ಳುವುದು ಇಂದಿನ ತುರ್ತು ಅವಶ್ಯಕತೆ. ಇಪ್ಪತ್ತೊಂದನೇ ಶತಮಾನದ ಅನೇಕ ಸವಾಲುಗಳನ್ನು ಎದುರಿಸಲು ತನ್ನ ರಾಷ್ಟ್ರ ಸನ್ನದ್ಧವಾಗಿರಬೇಕೆಂದು ಗೋರ್ಬಚೇವ್ ಹೇಳುತ್ತಿದ್ದರೆ ಅದು ಅವರ ಸಾಮರ್ಥ್ಯದ ದ್ಯೋತಕ; ದೌರ್ಬಲ್ಯದ ಕುರುಹಲ್ಲ.

ಸೋವಿಯೆತ್ ಒಕ್ಕೂಟದಲ್ಲಿ ಸುಧಾರಣೆಗಳು

"ಸೋವಿಯೆತ್ ಒಕ್ಕೂಟದಲ್ಲಿ ಇಂದು ನಡೆಯುತ್ತಿರುವ ಸುಧಾರಣೆಗಳೆಂದರೆ ಅದು ಕಮ್ಯೂನಿಸ್ಟ್ ವ್ಯವಸ್ಥೆಯನ್ನು ಕಿತ್ತುಹಾಕಿ ಪಾಶ್ಚಿಮಾತ್ಯ ಮಾದರಿಯ 'ಪ್ರಜಾಪ್ರಭುತ್ವದ ಸ್ಥಾಪನೆಯೆಂದು ಯಾರಾದರೂ ಭಾವಿಸಿದ್ದರೆ ಅದು ಅವರ ಮೂರ್ಖತನ. ಗೋರ್ಬಚೇವ್ ಕುಸಿಯುತ್ತಿರುವ ವ್ಯವಸ್ಥೆಯೊಂದನ್ನು ದಿವಾಳಿಯೆಬ್ಬಿಸಲು ಹೊರಟವರೂ ಅಲ್ಲ, ಆತ ತಮ್ಮ ವ್ಯವಸ್ಥೆಯ ಜಿಗುಟುತನ ಮತ್ತು ಕೆಲವು ವಿಕೃತಿಗಳನ್ನು ಕಿತ್ತೊಗೆದು ಅದನ್ನು ಕೆಲಸವನ್ನು ಹಮ್ಮಿಕೊಂಡಿದ್ದಾರೆ. ಅವರು ತಮ್ಮ ವ್ಯವಸ್ಥೆಯ ಮೇಲಿನ ಸಂಶಯದಿಂದಈ ಕೆಲಸ ಮಾಡುತ್ತಿಲ್ಲ. ಅದರ ಮೇಲಿನ ಗಾಢವಾದ ನಂಬುಗೆಯೇ ಅವರಿಗೆ ಪ್ರೇರೆಪಣೆ. ಲೆನಿನ್ ಅವರು ಹೇಳಿರುವಂತಹ 'ಆಕರ್ಷಕ ಹಾಗೂ ಬೌದ್ಧಿಕವಾದ' ಅಧಿಕಾರವನ್ನು ಧೃಢ ನಿರ್ಧಾರದೊಂದಿಗೆ ಬೆಸೆದು ಕಮ್ಯುನಿಸ್ಟ್ ಸಿದ್ಧಾಂತದ ಮೂಲ ಉದ್ದೇಶ ಮತ್ತು ಬಲವನ್ನು ಅದು ಮೈಗೂಡಿಸಿಕೊಳ್ಳುವಂತೆ ಸೋವಿಯೆತ್ ವ್ಯವಸ್ಥೆಯನ್ನು ಸುಧಾರಿಸಲಾಗುತ್ತಿದೆ. ಸುಧಾರಣೆಗೆ ತನ್ನನ್ನು ಒಳಪಡಿಸಿಕೊಳ್ಳುವ ಕಮ್ಯೂನಿಸಂನ ಚಾರಿತ್ರಿಕ ಸಾಮರ್ಥ್ಯವನ್ನು ನಾವಿಲ್ಲಿ ಕಣ್ಣಾರೆ ಕಾಣುತ್ತಿದ್ದೇವೆ. ಬದಲಾಗದೇ ಇರುವವರು ಅಳಿದು ಹೋಗುತ್ತಾರೆ. ಈ ದೃಷ್ಟಿಯಲ್ಲಿ ಗೋರ್ಬಚೇವ್ ಅತ್ಯಂತ ಅಪಾಯಕಾರಿ. ಧೀರ್ಘಕಾಲೀನ ಕಾರ್ಯಕ್ರಮವೊಂದರ ಜಾಡಿನಲ್ಲೇ ಸಾಗುವ ಈತ ಪಾಶ್ಚಿಮಾತ್ಯ ಪದ್ಧತಿಯ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿಗೆ ತಲೆನೋವುಂಟು ಮಾಡಬಲ್ಲ; ಸವಾಲೆಸೆಯ ಬಲ್ಲ.

ಮಹಾರಾಷ್ಟ್ರ : ಪವರ್‌ಲೂಂ ಉದ್ಯಮದಲ್ಲಿ ಬಿಕ್ಕಟ್ಟು

1985ರಲ್ಲಿ ಕೇಂದ್ರ ಸರ್ಕಾರವು ಘೋಷಿಸಿದ ಹೊಸ ಜವಳಿ ನೀತಿ ವಿನಾಶಕರ ಸ್ವರೂಪವನ್ನು ಪಡೆಯುತ್ತಿವುದು ನಿಚ್ಚಳವಾಗಿ ಎದ್ದು ಕಾಣುತ್ತಿದೆ. ಜವಳಿ ಗಿರಣಿಗಳ ಪರಿಸ್ಥಿತಿ ಶಾಪಗ್ರಸ್ಥವಾಗಿದೆ. ನಿರುದ್ಯೋಗ,ಕಾರ್ಖಾನೆಗಳ ಮುಚ್ಚುವಿಕೆ ದಿಗಿಲು ಹುಟ್ಟಿಸುತ್ತಿದೆ. ಮಹಾರಾಷ್ಟ್ರ ರಾಜ್ಯದಲ್ಲಂತೂ ಇದು ಇನ್ನಷ್ಟು ಗಂಭೀರವಾಗಿದ್ದ ಇಚ್ಚಲ್‌ಕರಂಜಿ, ಸಾಂಗ್ಲಿ, ಸೋಲಾಪುರ,ಮತ್ತಿತರ ಕಡೆಗಳಲ್ಲಿ ಪವರ್‌ಲೂಂ ಕಾರ್ಮಿಕರು ಕನಿಷ್ಠ ವೇತನ ಜಾರಿಗಾಗಿ ಎರಡು ವರ್ಷಗಳಿಂದ ಸಿ. ಐ.ಟಿ.ಯು. ನೇತೃತ್ವದಲ್ಲಿ ಧೀರ ಹೋರಾಟವನ್ನು ನಡೆಸುತ್ತಿದ್ದಾರೆ.ಇಚ್ಚಲ ಕರಂಜಿಯೊಂದರಲ್ಲೇ 25,000 ಯಂತ್ರಚಾಲಿತ ಮಗ್ಗಗಳು ಮುಚ್ಚಲ್ಪಟ್ಟಿವೆ. ಇತರೆಡೆಗಳಲ್ಲೂ ಪರಿಸ್ಥಿತಿ ಹದಗೆಟ್ಟಿದೆ. ಹೊಸ ಜವಳಿ ನೀತಿ ವಿಫಲವಾಗಿ ಉದ್ಯಮವನ್ನು ಹಾಳುಗೆಡವಿದೆಯೆಂಬುದನ್ನು ಮಹಾರಾಷ್ಟ್ರ ರಾಜ್ಯ ಸರ್ಕಾರ ವಿಧಾನಸಭೆಯಲ್ಲಿ ಒಪ್ಪಿಕೊಂಡಿದೆ. ಕೇಂದ್ರಸರ್ಕಾರಕ್ಕೂ ಸಹ ಇದೇ ಅಭಿಪ್ರಾಯವನ್ನೇ ತಿಳಿಸಲಾಗಿದೆ.ಸರ್ಕಾರದ ರಫ್ತು ನೀತಿಯಿಂದಾಗಿ ಹತ್ತಿದಾರದ ಬೆಲೆ ಹೆಚ್ಚಿ ನ್ಯಾಯುತ ಬೆಲೆಯಲ್ಲಿ ದೊರಕದಿರುವುದೇ ಪ್ರಸಕ್ತ ಬಿಕ್ಕಟ್ಟಿಗೆ ಮುಖ್ಯ ಕಾರಣವಾಗಿದೆ. ಕಳೆದ ವರ್ಷ ಕೇಂದ್ರಸರ್ಕಾರ ಎರಡೂವರೆ ಲಕ್ಷ ಬೇಲುಗಳನ್ನು ಹತ್ತಿದಾರವನ್ನು ರಫ್ತು ಮಾಡಿತ್ತು.ಈ ವರ್ಷ ಆರು ಲಕ್ಷಬೇಲುಗಳನ್ನು ಕಳಿಸುವ ಯೋಜನೆಯಿತ್ತು. ಆದರೆ ಇದ್ದಕಿದ್ದಂತೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಿದ ಕಾರಣದಿಂದ ಸರ್ಕಾರ 12 ಲಕ್ಷ ಬೇಲುಗಳನ್ನು ರಫ್ತುಮಾಡಿತು. ಇದರಿಂದಾಗಿ ಆಂತರಿಕ ಸರಬರಾಜಿನಲ್ಲಿ ಕೊರತೆಯುಂಟಾಗಿ ಹತ್ತಿನೂಲಿನ ಬೆಲೆ ವಿಪರೀತ ಹೆಚ್ಚಿತು. ಇದರಿಂದಾಗಿ ಪವರ್‌ಲೂಂ ಮಾಲೀಕರು ಹೋರಾಟದ ಹಾದಿಯನ್ನು ಹಿಡಿಯಬೇಕಾಯಿತು. ಸಣ್ಣ ಪ್ರಮಾಣದ ಮಾಲೀಕರು ಎರಡರಿಂದ ಹತ್ತು ಮಗ್ಗಗಳನ್ನು ಹೊಂದಿದ್ದು ಅವರುಗಳು ಸಿ.ಐ.ಟಿ.ಯು. ಅಡಿಯಲ್ಲಿ ಹೋರಾಟ ನಡೆಸುತ್ತಿದ್ದಾರೆ. ಕಳೆದ ತಿಂಗಳು 3,000 ಮಾಲಕರ ಒಂದು ಸಮಾವೇಶ ನಡೆದು ಹೋರಾಟ ಸಮಿತಿ ರಚಿಸಲಾಯಿತು. ನಂತರ ವ್ಯಾಪಕ ಪ್ರಮಾಣದ ಹೋರಾಟಗಳು ನಡೆಯುತ್ತಿದೆ. ಉಪವಾಸ ಸತ್ಯಾಗ್ರಹ, ಮೆರವಣಿಗೆ, ಬಹಿರಂಗ ಸಭೆಗಳು ನಡೆದಿವೆ. ಹೋರಾಟ ಸಮಿತಿ ಜೈಲು ಭರೋ ಮತ್ತು ಇಚ್ಚಲ್ ಕರಂಜಿ ಬಂದ್‌ಗೆ ನೀಡಿದ ಕಾರ್ಯಕ್ರಮದಲ್ಲಿ 20,000 ಮಂದಿ ಭಾಗವಹಿಸಿದರು. ಇದೇ ಸಮಯದಲ್ಲಿ ಕಾಂಗ್ರೆಸ್ನ ಕಾರ್ಯಕ್ರಮಗಳೆಲ್ಲವೂ ವಿಫಲಗೊಂಡು ಅದರ ನಿಜ ಬಣ್ಣವನ್ನು ಬಯಲುಗೊಳಿಸಿದೆ. ಸಿ.ಐ.ಟಿ.ಯು. ಮತ್ತು ಸಿ.ಪಿ.ಐ. (ಎಂ) ಹೊಸ ಆರ್ಥಿಕ ನೀತಿಯ ವಿರುದ್ಧ ಬಲಿಷ್ಟವಾದ ಹೋರಾಟವನ್ನು ರೂಪಿಸುತ್ತಿದೆ.

ವಿದ್ಯುತ್‌ದರ ಏರಿಕೆಗೆ ವ್ಯಾಪಕ ಪ್ರತಿಭಟನೆ

ವಿದ್ಯುತ್ ದರ ಏರಿಕೆಯನ್ನು ಪ್ರತಿಭಟಿಸಿ ಗುಜರಾತಿನ ಭಾವನಗರದಲ್ಲಿ ಬೃಹತ್ ಚಳುವಳಿ ನಡೆಯುತ್ತಿದೆ. ಸಿ.ಪಿ.ಐ. (ಎಂ) ಮತ್ತು ಜನತಾ ಪಕ್ಷ ಜಂಟಿಯಾಗಿ ಜುಲೈ 25ರಂದು ನೀಡಿದ ಬಂದ್ ಕರೆ ಅಮೋಘ ಯಶಸ್ಸು ಪಡೆಯಿತು. ಎಲ್ಲಾ ಜನ ವಿಭಾಗಗಳೂ ಅತ್ಯುತ್ಸಾಹದಿಂದ ಪಾಲ್ಗೊಳ್ಳುತ್ತಿರುವ ಹೋರಾಟ ಸಾಮೂಹಿಕ ಚಳುವಳಿಯಾಗಿ ಮಾರ್ಪಟ್ಟಿದೆ. ಸಿ.ಪಿ.ಐ.(ಎಂ) ಕಾರ್ಯಕರ್ತರು ಚಳುವಳಿಯ ಮುಂಚೂಣಿಯಲ್ಲಿದ್ದು ಅಪಾರ ಜನ ಬೆಂಬಲವನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಗುಜರಾತನ ಅಮರ ಸಿಂಗ್ ಚೌಧರಿ ಸರ್ಕಾರ ಕೆಲವು ರಿಯಾಯಿತಿಯನ್ನು ಪ್ರಕಟಿಸಿ ಚಳುವಳಿಯನ್ನು ಹಿಂತೆಗೆದು ಕೊಳ್ಳುವಂತೆ ಮಾಡಿರುವ ಕೋರಿಕೆಯನ್ನು ಸಿ.ಪಿ.ಐ (ಎಂ) ಮತ್ತು ಜನತಾ ಪಕ್ಷಗಳು ತಿರಸ್ಕರಿಸಿವೆ. ಬಿ.ಜೆ.ಪಿ. ಮಾತ್ರ ತಾನು ಪ್ರತ್ಯೇಕವಾಗಿ ನಡೆಸುತ್ತಿದ್ದ ಹೋರಾಟವನ್ನು ಹಿಂತೆಗೆದುಕೊಂಡಿದೆ.

ಈ ಹೋರಾಟವು ಇತ್ತೀಚಿನ ದಿನಗಳಲ್ಲಿ ಗುಜರಾತಿನಲ್ಲಿ ನಡೆದಿರುವ ಹೋರಾಟಗಳಲ್ಲೆಲ್ಲಾ ಅತ್ಯಂತ ಮಹತ್ವದ್ದಾಗಿದೆ.

REG No. BGW-148 MAG (2) PRB DECR 319/-78-79

ಭಾರತದ ಆಳುವ ವರ್ಗ ಸೋವಿಯತ್ ಕಮ್ಯೂನಿಸ್ಟ್ ಪಕ್ಷ ಮತ್ತು ಸಿಪಿಐ(ಎಂ)ಗಳ ನಡುವೆ ಭಿನ್ನತೆ

(1ನೇ ಪುಟದಿಂದ)

'ಕಮ್ಯುನಿಸ್ಟ್' ಪತ್ರಿಕೆಗಳ ಲೇಖನಗಳಿಂದ ಕಾಣುತ್ತಿದೆ. ಇಂತಹ ವಿಷಯಗಳಲ್ಲಿ ಪಕ್ಷ ಸ್ವಾಭಾವಿಕವಾಗಿಯೇ ನಮ್ಮ ಸ್ವಂತ ತಿಳುವಳಿಕೆಯ ಆಧಾರದ ಮೇಲೆ ವರ್ತಿಸುತ್ತದೆ.

ಸಿ. ಪಿ. ಎಸ್ .ಯು. ತನ್ನ ವಿಚಾರ ಪ್ರಚಾರ ಮಾಡುತ್ತಿದೆ.ಅಂದರೆ ನಮ್ಮ ನಡುವೆ ಅಭಿಪ್ರಾಯ ಭಿನ್ನತೆಯಿದೆ ಎಂಬುದನ್ನು ಒಪ್ಪಿಕೊಂಡಿದ್ದೇವೆ ಎಂದು ಮಾತ್ರ ಅರ್ಥ.

ನಮ್ಮದು ವರ್ಗ ವಿರೋಧ

ಉದಾಹರಣೆಗೆ, ಸೋವಿಯತ್ ಪತ್ರಿಕೆಗಳಲ್ಲಿ ಬಂದ ಲೇಖನಗಳು ಪಿ.ಟಿ.ಐ. ವರದಿ ಪ್ರಕಾರ ಭಾರತ ಸರ್ಕಾರ ಹಿರಿಬೂರ್ಜ್ವಾ ವರ್ಗದಿಂದ ಸ್ವತಂತ್ರವಾಗಿದೆ, ರಾಜೀವ್‌ಗಾಂಧಿ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳ ಭ್ರಷ್ಟಾಚಾರದ ಆಪಾದನೆಗಳು ಸರ್ಕಾರದ ವಿರುದ್ಧ ಭಾವೋದ್ರೇಕ ಹರಡಲು ಮಾಡಿದ ಅತಿರಂಜಿತ ಆಪಾದನೆಗಳು ಎಂದಿನಯಂತೆ. ಈ ವಿಶ್ಲೇಷಣೆಗಳ ಬಗ್ಗೆ ನಮ್ಮ ತೀವ್ರ ಭಿನ್ನಾಭಿಪ್ರಾಯವಿದೆ.

ಸರ್ಕಾರ ಮತ್ತು ಆಳುವ ಪಕ್ಷ ವಿದೇಶೀ ಗುತ್ತೆದಾರಿಗಳೊಂದಿಗೆ ಸಹಕರಿಸುವ ವರ್ಗದ ನೇತೃತ್ವದಲ್ಲಿರುವ ಬೂರ್ಜ್ವಾ ಮತ್ತು ಭೂಮಾಲಕರ ಕೂಟ ಎಂದು ನಮ್ಮ ಪಕ್ಷದ ಕಾರ್ಯಕ್ರಮ ವರ್ಣಿಸಿದೆ. ಸರ್ಕಾರದಲ್ಲಿ ಹೆಚ್ಚುತ್ತಿರುವ ಸರ್ವಾಧಿಕಾರೀ ಪ್ರವೃತ್ತಿ, ದುಡಿಯುವ ಜನಗಳ ಮೇಲೆ ಆಕ್ರಮಣ ಮತ್ತು ಆಳುವ ವಲಯಗಳಲ್ಲಿನ ಕುಖ್ಯಾತ ಭ್ರಷ್ಟಾಚಾರಗಳ ಮೂಲ ಈ ವರ್ಗ ಸ್ವಭಾವದಲ್ಲೇ ಇದೆ. ಆದ್ದರಿಂದಲೇ ಕ್ರಾಂತಿಕಾರೀ ಕಾರ್ಮಿಕ ವರ್ಗ ಮತ್ತು ಅದರ ವರ್ಗಮಿತ್ರರು ಇದರ ವಿರುದ್ಧ ನಿರಂತರ ಹೋರಾಟ ನಡೆಸಿಕೊಂಡು ಬಂದಿದ್ದಾರೆ. ಆದ್ದರಿಂದಲೇ ನಮ್ಮ ಪಕ್ಷ 1970ರ ದಶಕದಲ್ಲಿ ಇಂದಿರಾಗಾಂಧಿಯವರ ತುರ್ತು ಪರಿಸ್ಥಿತಿಯನ್ನು ಫ್ಯಾಸಿಸ್ಟ್ ವಿರೋಧಿ ಎಂದೆಲ್ಲಾ ವರ್ಣಿಸಿದ ಸಿ. ಪಿ. ಎಸ್. ಯು.ನ ಪ್ರಚಾರದಿಂದ ದೂರವುಳಿಯಿತು.

ಮತ್ತು ಈಗ ಇದೇ ಕಾರಣಕ್ಕಾಗಿ ರಾಜೀವ್ ಸರ್ಕಾರದ ಬೆಂಬಲಕ್ಕೆ ನಿಲ್ಲಬೇಕೆಂಬ ಸೋವಿಯೆತ್ ಪತ್ರಿಕೆಗಳು ಎಡ ಮತ್ತು ಪ್ರಜಾಪ್ರಭುತ್ವವಾದೀ ಪತ್ರಿಕೆಗಳಿಗೆ ನೀಡಿದ ಕರೆಯನ್ನು ನಾವು ತಿರಸ್ಕರಿಸುತ್ತೇವೆ. ಆದ್ದರಿಂದ ಕೆಲವು ಸೋವಿಯತ್ ಪತ್ರಿಕೆಗಳು ಹೇಳಿರುವುದರಿಂದ ಭಾರತೀಯ ಕಮ್ಯುನಿಸ್ಟರು ರಾಜೀವ್‌ಗಾಂಧಿಯವರಿಗೆ ಬೆಂಬಲ ನೀಡುತ್ತಾರೆ ಎಂಬ ಊಹಾಪೋಹದಲ್ಲಿ ತೊಡಗಿರುವ ರಾಜಕೀಯ ಪಂಡಿತರು ಸ್ವಂತ ಭ್ರಮಾಲೋಕದಲ್ಲಿ ವಿಹರಿಸುತ್ತಿದ್ದಾರಷ್ಟೇ.

ಅತ್ಯಂತ ಆಪತ್ತಿನ ಗಳಿಗೆಯಲ್ಲಿ ಎಡಪಂಥೀಯರು ರಾಜೀವ್‌ಗಾಂಧಿಯವರನ್ನು ಬೆಂಬಲಿಸುತ್ತಾರೆ ಎಂಬ ಊಹೆಯನ್ನು ಹರಡುತ್ತಿರುವವರಿಗೆ ನಾನು ನೆನಪಿಸುವುದು ಇಷ್ಟೆ-ಅವಿಭಜಿತ ಕಮ್ಯುನಿಸ್ಟ್ ಪಕ್ಷವಾಗಲೀ, ವಿಭಜನೆಯ ನಂತರ ಸಿ.ಪಿ.ಐ.(ಎಂ) ಆಗಲೀ, ಕಾಂಗ್ರೆಸ್ ಆಳ್ವಿಕೆಯ ವಿರುದ್ಧ ಹೋರಾಟದಲ್ಲಿ ನಿರಂತರವಾಗಿ ಒಂದೇ ಧೋರಣೆ ಅನುಸರಿಸಿಕೊಂಡು ಬಂದಿದೆ. ಕೇಂದ್ರ ಸರ್ಕಾರದಲ್ಲಿ ಜವಾಹರಲಾಲ್ ನೆಹ್ರೂ ಅಥವಾ ಇಂದಿರಾಗಾಂಧಿ ನಾಯಕರಾಗಿದ್ದರು ಅಥವಾ ಈಗ ರಾಜೀವ್‌ಗಾಂಧಿ ಇರಲಿ ನಾವು ಸದಾ ಸಂಬಂಧಪಟ್ಟ ಸರಕಾರ ವಿರುದ್ಧ ನೀತಿಬದ್ಧ ಹೋರಾಟದ ನಿಲುವು ತಳೆಯುತ್ತಾ ಬಂದಿದೆ. ಕಾಂಗ್ರೆಸ್ ಸರ್ಕಾರವನ್ನು ಸ್ಥಾನದಲ್ಲಿ ಬೇರೆ ಸರ್ಕಾರ ತರಲು ಎಲ್ಲಾ ಸಮರಶೀಲ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳ ಗರಿಷ್ಠ ಐಕ್ಯತೆ ಬೆಸೆಯಲು ನಾವು ಸದಾ ಪ್ರಯತ್ನಿಸುತ್ತಾ ಬಂದಿದ್ದೇವೆ, ಈಗಲೂ ಪ್ರಯತ್ನಿಸುತ್ತಿದ್ದೇವೆ

ಅಷ್ಟೇ ಅಲ್ಲ ದಿವಂಗತ ಆಚಾರ್ಯ ಕೃಪಲಾನಿಯವರು ಕಿಸಾನ್ ಮಜೂದೂರ್ ಪ್ರಜಾಪಾರ್ಟಿ ಸ್ಥಾಪಿಸಿದಂದಿನಿಂದ ಈಗ ಭಿನ್ನಮತೀಯ ಕಾಂಗ್ರೆಸ್ಸಿಗರು ಕೆಲವೊಂದು ಧೋರಣೆಗಳ ಬಗ್ಗೆ ದೃಢ ವಿರೋಧ ವ್ಯಕ್ತ ಪಡಿಸುತ್ತಿರುವ ಇಂದಿನ ವರೆಗೆ ಆಳುವ ಪಕ್ಷದೊಳಗೆ ತುಸುವೇ ಭಿನ್ನ ಕಂಡುಬಂದಾಗಲೆಲ್ಲಾ ಕಾಂಗ್ರೆಸ್ ಪಕ್ಷದೊಡನೆಹೋಲಿಸಿದಾಗ ಸ್ವಲ್ಪ ಹೆಚ್ಚು ಪ್ರಜಾಪ್ರಭುತ್ವವಾದೀ ನಿಲುವು ತಳೆದ ಗುಂಪನ್ನು ಬೆಂಬಲಿಸುತ್ತಾ ಬಂದಿದ್ದೇವೆ. 1969ರಲ್ಲಿ ಇಂದಿರಾಗಾಂಧಿಯವರಿಗೆ ನಮ್ಮ ಸೀಮಿತ ತಾತ್ಕಾಲಿಕ ಬೆಂಬಲದ ಆಧಾರವೂ ಇದೇ ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ಧತಿ ಮುಂತಾದ ಆಕೆಯ ಧೋರಣೆಗಳನ್ನು ಬೆಂಬಲಿಸಿದೆವು.

ಈ ರೀತಿ ಕಾಂಗ್ರೆಸ್'ಗೆ ನಮ್ಮ ವಿರೋಧ ಅದು ಸದಾ ಆಳುವ ವರ್ಗ ಕೂಟದ ಪ್ರಮುಖ ಪ್ರತಿನಿಧಿಯಾಗಿರುವುದರಿಂದ ಹಾಗೂ ಅದರ ವರ್ಗ ಧೋರಣೆಗಳ ವಿರುದ್ಧ ಕಾಂಗ್ರೆಸ್ಸಿನೊಳಗಿನ ವ್ಯಕ್ತಿಗಳ, ಗುಂಪುಗಳ ಬಗ್ಗೆ ನಮ್ಮ ನಿಲುವು ಸದಾ ಅವರ ನಿಲುವು, ಧೋರಣೆಗಳನ್ನು ಅವಲಂಬಿಸಿತ್ತೇ ಹೊರತು, ವ್ಯಕ್ತಿಗಳ ಮೇಲಲ್ಲ. ಈಗಲೂ ನಾವು ಅದೇ ನಿಲುವು ತಳೆದಿದ್ದೇವೆ.

ಈ ಹಿನ್ನೆಲೆಯಲ್ಲಿ ಮೇಲೆ ಹೇಳಿದ ರಾಜೀವ್ ಗಾಂಧಿಯವರ ಬಗ್ಗೆ ಕನಿಕರಪಡಬೇಕು. ಇವರ ತಾಯಿ "ಸಿಂಡಿಕೇಟ್" ಎಂಬ ಗುಂಪಿನ ಧೋರಣೆಗಳ ವಿರುದ್ಧ ಹೋರಾಡಿದಂತೆ ಇವರು ಈ ಮೂವರು ಸಹೋದ್ಯೋಗಿಗಳ ವಿರುದ್ಧ ಹೋರಾಡಿದರೇ ? ತನ್ನ ಧೋರಣೆಗಳೇನು,ಅದು ಈ ಮೂವರು ಮಾಜೀ ಸಹೋದ್ಯೋಗಿಗಳಂತ ಹೇಗೆ ಭಿನ್ನವಾಗಿದೆ ಎಂದು ಈಗಲಾದರೂ ರಾಜೀವಗಾಂಧಿ ನಮಗೆ ಹೇಳುವರೇ ?

ಸಿ.ಸಿ. ಕರೆಯ ಸಾರಾಂಶ

ಆರೀಫ್ ಮಹಮ್ಮದ್ ಖಾನ್ ರಾಜೀವ್‌ಗಾಂಧಿಯವರು ಮುಸ್ಲಿಂ ಮಹಿಳಾ ಮಸೂದೆ ಬಗ್ಗೆ ಸಮಯ ಸಾಧಕತನ ತೋರಿಸಿದಾಗ ರಾಜೀನಾಮೆಯಿತ್ತರೆಂಬುದು ನಮಗೆ ಚೆನ್ನಾಗಿ ಗೊತ್ತಿದೆ. ಈ ಪ್ರಶ್ನೆಕುರಿತಂತೆ ನಾವು ಆರೀಫ್ ಖಾನ್ ಜತೆಗಿದ್ದೇವೆಯೇ ಹೊರತು, ರಾಜೀವ್ ಗಾಂಧಿಯವರ ಜತೆಗಲ್ಲ.

ಅರುಣ್ ನೆಹ್ರೂ, ವಿ.ಸಿ.ಶುಕ್ಲಾ, ಅರಿಫ್ ಮಹಮ್ಮದ್ ಖಾನ್ ಉಚ್ಚಾಟನೆ ಸ್ಪಷ್ಟವಾಗಿ ಆಳುವ ಪಕ್ಷದ ಕುಖ್ಯಾತ ಸರ್ವಾಧಿಕಾರೀ ಪಕ್ಷ ಪ್ರವೃತ್ತಿಯನ್ನು ತೋರಿಸಿ ಕೊಟ್ಟಿತು. ಅದನ್ನು ಪ್ರತಿಭಟಿಸಿದಾಗ ವಿ.ಪಿ. ಸಿಂಗ್ ಉಚ್ಚಾಟನೆಯಾಯಿತು.

ಇವೆಲ್ಲಾ ಪ್ರಧಾನಿಗಳು ಅಧ್ಯಕ್ಷರಾಗಿರುವ ಪಕ್ಷದ ಆಂತರಿಕ ವಿಷಯಗಳು. ನಮಗೂ ಇದಕ್ಕೂ ನೇರ ಸಂಬಂಧವಿಲ್ಲ. 'ಭಿನ್ನ ಮತೀಯ' ಕಾಂಗ್ರೆಸ್ಸಿಗರು ಪ್ರಧಾನ ಮಂತ್ರಿಗಳ ಮಂತ್ರಿ ಮಂಡಲದಲ್ಲಿ ಸಹೋದ್ಯೋಗಿಗಳಾಗಿದ್ದಾಗ ತಳೆದ ನಿಲುವುಗಳು ಕೂಡಾ ನಮಗೆ ಸಂಬಂಧ ಪಟ್ಟದಲ್ಲ. ನಮಗೆ ಬೇಕಾಗಿರುವುದು ಉಚ್ಚಾಟನೆಯ ನಂತರ ಈಗ ಅವರೇನು ಮಾಡುತ್ತಿದ್ದಾರೆ ಎನ್ನುವುದು. ಮುಖ್ಯ ಅಂಶವೆಂದರೆ, ಹಿಂದೆ ಅವರೇನೇ ಮಾಡಿರಲಿ, ಈಗ ಅವರು ದುಡಿಯುವ ಜನಗಳ ಕುಂದು ಕೊರತೆಗಳಿಗೆ ದನಿ ನೀಡುತ್ತಿದ್ದಾರೆ. ದೇಶ ವ್ಯಾಪೀ ಬರ, ಉಚ್ಛಸ್ಥಾನಗಳಲ್ಲಿ ಭ್ರಷ್ಟಾಚಾರ, ಪ್ರಜಾಸತ್ತಾತ್ಮಕ ಸಂಸ್ಥೆಗಳ ಕಾರ್ಯನಿರ್ವಹಣೆ ಇತ್ಯಾದಿ ಪ್ರಶ್ನೆಗಳನ್ನೆತ್ತುತ್ತಿದ್ದಾರೆ. ಜನ ಸಮೂಹಗಳು ಕೂಡಾ ಇದಕ್ಕೆ ಓಗೊಡುತ್ತಿದ್ದಾರೆ.

ಆದ್ದರಿಂದಲೇ 'ವಿರೋಧ ಪಕ್ಷಗಳು ಐಕ್ಯತೆಯ ಪ್ರಭಾವ ಈಗಾಗಲೇ ಕಾಂಗ್ರೆಸ್ (ಐ) ಸದಸ್ಯತ್ವದೊಳಗೆ ಕಂಡು ಬರುತ್ತಿದ್ದು ಇದರಿಂದಾಗಿ ಸದ್ಯ ಸಣ್ಣ ಸಂಖ್ಯೆಯಲ್ಲಿದ್ದರೂ ಹೆಚ್ಚೆಚ್ಚು ಸದಸ್ಯರು ಸರ್ಕಾರೀ ಭ್ರಷಾಚಾರದ ವಿರುದ್ಧ ಪ್ರತಿಭಟನೆಯ ದನಿಯೆತ್ತಲು ರಾಷ್ಟ್ರೀಯ ಐಕ್ಯತೆಯಂತಹ ಪ್ರಶ್ನೆಗಳನ್ನೆತ್ತಲು ಅವಕಾಶವಾಗಿದೆ. ವಸ್ತುನಿಷ್ಟವಾಗಿ ನೋಡಿದರೆ ಇಂತಹ ಭಿನ್ನಾಭಿಪ್ರಾಯ ಐಕ್ಯತೆಯ ಶಕ್ತಿಗಳಿಗೆ ನೆರವಾಗುವಂತಹುದಾದ್ದರಿಂದ ಅದನ್ನು ಸ್ವಾಗತಿಸಬೇಕು" ಎಂದು ಕೇಂದ್ರ ಸಮಿತಿಯ ರಾಜಕೀಯ ಠರಾವು ಗಮನಿಸಿತು. ಮತ್ತು ಅದರಿಂದಾಗಿಯೇ ಕೇಂದ್ರ ಸಮಿತಿ "ಭ್ರಷ್ಟಾಚಾರ ಮತ್ತು ರಾಜೀವ್ ಆಳ್ವಿಕೆಯ ಇತರ ಮುಖಗಳನ್ನು ವಿರೋಧಿಸುವ ಎಲ್ಲಾ ಕಾಂಗ್ರೆಸ್ಸಿಗರು ಒಂದು ಧೀರ ನಿಲುವು ತಳೆದು ಜನತೆಗಾಗಿ ಹೊಸ ಸರ್ಕಾರವೊಂದು ಬೇಕು ಎಂದು ಒತ್ತಾಯಿಸುವ ಜನಪ್ರಿಯ ಶಕ್ತಿಗಳೊಂದಿಗೆ ಸೇರಿಕೊಳ್ಳಬೇಕೆಂದು' ಕರೆ" ನೀಡಿದೆ.

ಕಳೆದ 35 ವರ್ಷಗಳಲ್ಲಿ (ಅವಿಭಜಿತ ಕಮ್ಯೂನಿಸ್ ಪಕ್ಷ ಕಾಂಗ್ರೆಸ್ ಗುತ್ತೆದಾರಿಯನ್ನು ಕೊನೆ ಗೊಳಿಸಬೇಕೆಂದು 1952ರಲ್ಲಿ ಕರೆ ನೀಡಿದಂದಿನಿಂದ) ನಾವು ಧೋರಣೆಗಳ ಆಧಾರದ ಮೇಲೆ ಮುಖಂಡತ್ವಕ್ಕೆ ಸವಾಲೆಸೆದ ಎಲ್ಲಾ ಕಾಂಗ್ರೆಸ್ಸಿಗರನ್ನು ಸ್ವಾಗತಿಸಿ, ಇಂತಹ ಪ್ರತಿ ಸಂದರ್ಭದಲ್ಲೂ ನಮ್ಮ ಆ ಹೊಸ ಮಿತ್ರರೊಂದಿಗೆ ಸಮಾನ ಅಭಿಪ್ರಾಯದ ಅಂಶಗಳನ್ನು ಕಾಣಲು ಪ್ರಯತ್ನಿಸಿದ್ದೇವೆ. ಅದೇ ವೇಳೆಗೆ ಅವರಿಗೂ ನಮಗೂ ಭಿನ್ನತೆಯಿರುವ ವಿಷಯಗಳಲ್ಲಿ ತಮ್ಮ ಸ್ವತಂತ್ರ ನಿಲುವು ತಳೆಯುವ ಹಕ್ಕು ಇವರಿಗೂ ಇದೆಯೆಂದೂ ಗುರುತಿಸಿ ಕೊಂಡಿದ್ದೇವೆ. ಇದರಿಂದಾಗಿಯೇ 1967ರಲ್ಲಿ ಆರೇಳು ರಾಜ್ಯಗಳಲ್ಲಿ ಮಾಜೀ ಕಾಂಗ್ರೆಸ್ಸಿಗರನ್ನು ಮತ್ತು 1977ರಲ್ಲಿ ಜನತಾ ಪಕ್ಷವನ್ನು ನಾವು ಬೆಂಬಲಿಸಿದ್ದು. ಇಂತಹ ಒಂದು ಬೆಳವಣಿಗೆ ಈಗ ಕಂಡು ಬಂದರೂ (ಆ ಸಾಧ್ಯತೆ ಬಹಳ ಇದೆ) ನಾವು ಅವರೊಂದಿಗೆ ಖಂಡಿತವಾಗಿಯೂ ಸಹಕರಿಸುತ್ತೇವೆ.ಕೇಂದ್ರ ಸಮಿತಿಯ ಕರೆಯ ಸಾರವೇ ಇದು.

ಬಹಿರಂಗ ಸಂಘರ್ಷ

ಮುಂದಿನ ಬೆಳವಣಿಗೆಗಳು ಹೇಗಿರಬಹುದೆಂದು ಇಷ್ಟು ಬೇಗನೇ ಹೇಳಲು ಸಾಧ್ಯವಿಲ್ಲವೆಂಬುದೇನೋ ನಿಜ. ಆದರೆ ತಕ್ಷಣವೇ ದೇಶವ್ಯಾಪೀ ಬರ ಪರಿಸ್ಥಿತಿ, ಉಚ್ಛಸ್ಥಾನಗಳಲ್ಲಿ ಭ್ರಷ್ಟಾಚಾರ ಇತ್ಯಾದಿ ಬೇಡಿಕೆಗಳೊಂದಿಗೆ ರಾಜೀವ್ ಸರ್ಕಾರದ ರಾಜೀನಾಮೆ ಮತ್ತು ಮಧ್ಯಾವಧಿ ಚುನಾವಣೆಗೆ ಒತ್ತಾಯಿಸಿ ಒಂದು ಸರ್ವಸಾಮಾನ್ಯ ಆಂದೋಲನ ಎಲ್ಲಾ ಎಡ ಮತ್ತು ಜಾತ್ಯತೀತವಿರೋಧ ಪಕ್ಷಗಳು ಮತ್ತು ಉಚ್ಚಾಟನೆಯಾದ ಅಥವಾ ತಾವೇ ರಾಜೀನಾಮೆ ನೀಡುವ ಭ್ರಮನಿರಸನಗೊಂಡ ಕಾಂಗ್ರೆಸ್ಸಿಗರು ಸೇರಿ ಕೊಳ್ಳುವುದು ಸಾಧ್ಯ. ನಮ್ಮ ಪಕ್ಷ ಈ ಕಾರ್ಯಕ್ರಮದ ಆಧಾರದ ಮೇಲೆಯೇ ಇವರೆಲ್ಲರಿಗೂ ಮನವಿ ಮಾಡಿಕೊಂಡಿವೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಪಕ್ಷಾಂತರ ಮಾಡಿಸುವ ಗುಂಪುಗಾರಿಕೆಯ ಬದಲು ಧೋರಣೆಗೆ ಸಂಬಂಧಪಟ್ಟ ತಿಕ್ಕಾಟಗಳು ಬಹಿರಂಗಕ್ಕೆ ಬಂದಿರುವಾಗ ಜಾತ್ಯತೀತ ಪ್ರಜಾಪ್ರಭುತ್ವವಾದೀ ವಿರೋಧ ಪಕ್ಷಗಳು ಮತ್ತು ಕಾಂಗ್ರೆಸ್ "ಭಿನ್ನಮತೀಯರು" ಪರಸ್ಪರ ಸಹಕರಿಸಬಹುದಾದ ಸಾಮೂಹಿಕ ಹೋರಾಟಗಳ ಒಂದು ಹೊಸ ಅಲೆಯನ್ನೇ ಎಬ್ಬಿಸುವುದು ಈಗ ಸಾಧ್ಯ ಇದೇ ನಮ್ಮ ಪಕ್ಷದ ಕರಯ ಸಾರಾಂಶ.

●

ಈ ವಾರ....

★ ಮಾನವ ಸರಪಳಿಯಲ್ಲಿ ಸೇರಲು ನಾನು ಇಚ್ಚಿಸಿದಾಗ ಮತ್ತು ದೈಹಿಕವಾಗಿ ನಾನು ಅದರಲ್ಲಿ ಭಾಗಹಿಸುವುದಿಲ್ಲ ಎಂದು ಹೇಳಿದಾಗ ನನ್ನ ನಿಲುವಿನಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಅಮೇರಿಕಾದ ಸಾಮ್ರಾಜ್ಯಶಾಹಿ ತತ್ವದ ವಿರುದ್ಧ ಮತ್ತು ಕೇಂದ್ರದ ಭ್ರಷ್ಟಾಚಾರದ ವಿರುದ್ಧ ನಾನು ಸರಪಳಿಯಲ್ಲಿ ಸೇರುವುದಾಗಿ ಹೇಳಿದೆನೆಂದೂ ವರದಿಯಾಗಿದೆ. ನಾನು ಈಗಲೂ ಸಾಮ್ರಾಜ್ಯಶಾಹಿ ವಿರೋಧಿ ಭ್ರಷ್ಟಾಚಾರದ ವಿರೋಧಿ-ಎಲ್ಲಿ ಅವು ಕಂಡುಬಂದರೂ ವಿರೋಧಿ ಆಯಿತೆ?

-ಯು. ಆರ್. ಅನಂತಮೂರ್ತಿ
ವಾಚಕರ ವಾಣಿಯಲ್ಲಿ

★ ಕೇರಳದ ಮತದಾರರು ಕೋಮುವಾದಿಗಳಿಗೆ ಯಾವ ರೀತಿ ಹೊಡೆತ ನೀಡಿದ್ದಾರೆಂಬುದನ್ನು ನಾನು ಪ್ರತ್ಯೇಕವಾಗಿ ವಿವರಿಸ ಬೇಕಾಗಿಲ್ಲ. ವಿದ್ಯಾವಂತ ಮುಸ್ಲಿಂಮಹಿಳೆಯರು ಮುಸ್ಲಿಂಲೀಗ್ ಅಭ್ಯರ್ಥಿಗಳಿಗೆ ಮತ ನೀಡಿಲ್ಲ ಎಂಬುದು ಏನನ್ನು ಸೂಚಿಸುತ್ತಿದೆ? ಜನರಲ್ಲಿ, ಅದರಲ್ಲೂ ಮುಸ್ಲಿಂ ಮಹಿಳೆಯರಲ್ಲಿ ಜಾಗೃತಿ ಮೂಡುತ್ತಿದೆ ಎಂಬುದನ್ನು ಯಾನ ಕ್ಷವೂ ಮರೆಯಬಾರದು.

ಸಾರಾಅಬೂಬಕರ್ 'ಲಂಕೇಶ್ ಪತ್ರಿಕೆ,ಯಲ್ಲಿ,

★ ದಿ ಅನ್‌ಲುಕರ್, ಲಿಂಕ್ ಹೀಗೆ ಒಂದೆರೆಡು ಪತ್ರಿಕೆಗಳನ್ನು ಬಿಟ್ಟರೆ ಬೇರೆಲ್ಲರೂ ಹೆಗಡೆಯವರನ್ನು ಹೊಗಳದ್ದೇಹೊಗಳಿದ್ದು. 1985ರ ಕೊನೆಯ ಹೊತ್ತಿಗೆ ಅಂದರೆ ಸುಮಾರು ಎರಡು ವರ್ಷಗಳಲ್ಲಿ ಹೆಗಡೆಯವರ ಮೇಲೆ ಸುಮಾರು 3700 ಲೇಖನಗಳ ಪ್ರಕಟವಾಗಿದ್ದವೆಂದು ಅನ್‌ಲುಕರ್ ವರದಿ ಮಾಡಿದೆ.

— ಶ್ರೀನಿವಾಸಗೌಡ, ಲಂಕೇಶ್ ಪತ್ರಿಕೆಯಲ್ಲಿ

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone : 75331 Editor P· Ramachandra Rao Managing Editor : N. K. Upadhyaya